ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ತುಮಕೂರು

District Institute of Education and Training, Tumkur

ಶಿಕ್ಷಕ ಶಿಕ್ಷಣ ಯೋಜನೆ 2020-21 ರ ಅಡಿಯಲ್ಲಿ

ಶೈಕ್ಷಣಿಕ ಅಧ್ಯಯನ

"ತುಮಕೂರು (ದಕ್ಷಿಣ) ಜಿಲ್ಲೆಯಲ್ಲಿ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q. R ಕೋಡ್ ಅನ್ನು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಬಳಸುತ್ತಿರುವ ವಿಷಯದ ಕುರಿತು ಶೈಕ್ಷಣಿಕ ಅಧ್ಯಯನ"

ಅಧ್ಯಯನಕಾರರು

ಶ್ರೀ ಮಲ್ಲಿಕಾರ್ಜುನಾರಾಧ್ಯ. ಹೆಚ್. ಆರ್

ಉಪನ್ಯಾಸಕರು

ಡಯಟ್ ತುಮಕೂರು

ಮಾರ್ಗದರ್ಶಕರು

ಡಾ|| ಆರ್. ರುದ್ರಾರಾಧ್ಯ

ಪ್ರಾಚಾರ್ಯರು

ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾ ವಿದ್ಯಾಲಯ

ಬಿ.ಹೆಚ್. ರಸ್ತೆ , ತುಮಕೂರು-2

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ತುಮಕೂರು

District Institute of Education and Training, Tumkur

ಕಲ್ಪತರು ನಾಡು ಮತ್ತು ಶೈಕ್ಷಣಿಕ ಜಿಲ್ಲೆಯ ಹೆಮ್ಮೆಯ ತರಬೇತಿ ಕೇಂದ್ರ

ಅಧ್ಯಯನದ ಶೀರ್ಷಿಕೆ

"A study on the usage of Q. R code being used among text books of Government Higher primary schools and High schools by students, teachers and parents in selected schools of Tumkur South district"

ಆಶಯ ನುಡಿಗಳು

2020-21 ನೇ ಸಾಲಿನ ಶಿಕ್ಷಕ ಶಿಕ್ಷಣ ಯೋಜನೆಯಡಿಯಲ್ಲಿ DSERT ವತಿಯಿಂದ ಅನುಮೋದನೆಯಾದ ***"ತುಮಕೂರು (ದಕ್ಷಿಣ) ಜಿಲ್ಲೆಯಲ್ಲಿ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q. R ಕೋಡ್ ಅನ್ನು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಬಳಸುತ್ತಿರುವ ವಿಷಯದ ಕುರಿತು ಶೈಕ್ಷಣಿಕ ಅಧ್ಯಯನ"*** *ಎಂಬ ಶೀರ್ಷಿಕೆಯಡಿ, ಶ್ರೀ ಮಲ್ಲಿಕಾರ್ಜುನಾರಾಧ್ಯ, ಉಪನ್ಯಾಸಕರು, ಡಯಟ್ ತುಮಕೂರು ಇವರು ಅಧ್ಯಯನವನ್ನು ಕೈಗೊಂಡಿರುತ್ತಾರೆ.*

ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳಲ್ಲಿ ಒಂದಾಗಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪಠ್ಯಪುಸ್ತಕಗಳಲ್ಲಿ Q. R ಕೋಡ್ ಅಳವಡಿಸಿರುವುದು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಪಠ್ಯಪುಸ್ತಕಗಳು ಮಹತ್ವದ ಸ್ಥಾನವನ್ನು ಹೊಂದಿವೆ. ಪಠ್ಯಪುಸ್ತಕಗಳು ಶಿಕ್ಷಕರಿಗೆ ಬೋಧನಾ ಚಟುವಟಿಕೆ ಕೈಗೊಳ್ಳಲು ಹಾಗೂ ವಿದ್ಯಾರ್ಥಿಗಳಿಗೆ ಕಲಿಕಾ ಅಭ್ಯಾಸಕ್ಕೆ ನೆರವು ಕಲ್ಪಿಸುತ್ತವೆ. ಪಠ್ಯಪುಸ್ತಕಗಳಲ್ಲಿ ಅನೇಕ ವಿಷಯಗಳ ಕುರಿತು ಮಾಹಿತಿ, ಅಂಕಿ ಅಂಶಗಳು, ಚಿತ್ರಗಳು, ಆಕೃತಿಗಳು ಇರುವುದು ಸಾಮಾನ್ಯ, ಆದರೆ ಪಠ್ಯಪುಸ್ತಕಗಳಲ್ಲಿ ಪಾಠಕ್ಕೆ ಸಂಬಂಧಿಸಿದ ಆಕರ್ಷಕ ವಿಡಿಯೋಗಳು ಸಹ ಲಭ್ಯವಾಗುವಂತಿದ್ದರೆ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚು ನೆರವು ಕಲ್ಪಿಸಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯವು 2019-20 ನೇ ಸಾಲಿನಿಂದ ಪಠ್ಯಪುಸ್ತಕಗಳಲ್ಲಿ ಡಿಜಿಟಲ್ ಸಂಪನ್ಮೂಲಗಳನ್ನು ಅಳವಡಿಸಿ ಪಠ್ಯಪುಸ್ತಕಗಳನ್ನು Energized Text Books (ETB) ಗಳನ್ನಾಗಿ ರೂಪಿಸಿದೆ.

ಈಗ ಪಠ್ಯಪುಸ್ತಕಗಳಲ್ಲಿ e-ಸಂಪನ್ಮೂಲಗಳ ವಿಡಿಯೋಗಳು, ಅಂತರ್ ಕ್ರಿಯಾತ್ಮಕ ಚಟುವಟಿಕೆಗಳು ಸೇರ್ಪಡೆಗೊಂಡಿವೆ. ಪ್ರಶ್ನೆ ಪತ್ರಿಕೆಗಳಿರುವ ಪಠ್ಯಪುಸ್ತಕಗಳನ್ನು ಲಿಂಕ್ ಮಾಡಿದ Q. R ಕೋಡ್ ಸಹಿತ ಪಠ್ಯಪುಸ್ತಕಗಳನ್ನು ಕರ್ನಾಟಕ ಸರ್ಕಾರವು ಶಾಲಾ ಮಕ್ಕಳಿಗೆ ಒದಗಿಸಿದೆ.

ಶಿಕ್ಷಕರು ಇದರ ಬಗ್ಗೆ, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ತಿಳಿಸಿ, ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q. R ಕೋಡ್ ಅನ್ನು ಬಳಸುವಂತೆ ಮಾಡಿ, ವಿದ್ಯಾರ್ಥಿಗಳ ಕಲಿಕೆಗೆ ಶ್ರಮಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

(ಕೆ. ಮಂಜುನಾಥ)

ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ

ಪ್ರಾಂಶುಪಾಲರು, ಡಯಟ್ ತುಮಕೂರು

ಕೃತಜ್ಞತೆಗಳು

"A study on the usage of Q. R code being used among text books of Government Higher primary schools and High schools by students, teachers and parents in selected schools of Tumkur (South) district"

"ತುಮಕೂರು (ದಕ್ಷಿಣ) ಜಿಲ್ಲೆಯಲ್ಲಿ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q. R ಕೋಡ್ ಅನ್ನು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಬಳಸುತ್ತಿರುವ ವಿಷಯದ ಕುರಿತು ಶೈಕ್ಷಣಿಕ ಅಧ್ಯಯನ" *ಎಂಬ ಶೀರ್ಷಿಕೆಯಡಿ ಶೈಕ್ಷಣಿಕ ಅಧ್ಯಯನವನ್ನು ಕೈಗೊಳ್ಳಲಾಗಿತ್ತು.*

2020-21 ನೇ ಸಾಲಿನ ಕ್ರಿಯಾಯೋಜನೆಯನ್ನು ಅನುಮೋದಿಸಿ ಈ ವಸ್ತುಸ್ಥಿತಿ ಅಧ್ಯಯನವನ್ನು ಕೈಗೊಳ್ಳಲು ಅನುಮತಿ ನೀಡಿದ ಮಾನ್ಯ ನಿರ್ದೇಶಕರು, DSERT ಬೆಂಗಳೂರು ಇವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

ಈ ಅಧ್ಯಯನವನ್ನು ಕೈಗೊಳ್ಳಲು ಅಗತ್ಯ ಸಲಹೆ, ಸಹಕಾರ ಮತ್ತು ಮಾರ್ಗದರ್ಶನ ನೀಡಿದ ಶ್ರೀ ಕೆ. ಮಂಜುನಾಥ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು, ಡಯಟ್ ತುಮಕೂರು, ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ತುಮಕೂರು, ಜಿಲ್ಲೆಯ ಆರೂ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ ಗಳು, ಪ್ರೌಢಶಾಲಾ ಮುಖ್ಯಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು, ಸಮೂಹ ಸಂಪನ್ಮೂಲ ವ್ಯಕ್ತಿಗಳು ಹಾಗೂ ಪೋಷಕ ವರ್ಗದವರಿಗೆ ಈ ಮೂಲಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

- *ಈ ಅಧ್ಯಯನ ಕಾರ್ಯದಲ್ಲಿ ಮಾರ್ಗದರ್ಶಕರಾದ ಶ್ರೀ ಡಾ// ಆರ್. ರುದ್ರಾರಾಧ್ಯ, ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾ ವಿದ್ಯಾಲಯ, ತುಮಕೂರು ಇವರಿಗೆ,*
- *ಸಹಕಾರ ನೀಡಿದ ನಮ್ಮ ಡಯಟ್‌ನ ಎಲ್ಲಾ ಹಿರಿಯ ಉಪನ್ಯಾಸಕರು, ಕಿರಿಯ ಉಪನ್ಯಾಸಕ ವರ್ಗದವರಿಗೆ ಮತ್ತು*
- *ಈ ಅಧ್ಯ್ಯಯನದ ವರದಿಯನ್ನು ಅಂದವಾಗಿ ಮತ್ತು ಸ್ಪುಟವಾಗಿ ಮುದ್ರಿಸಿ ಕೊಟ್ಟ ಶ್ರೀ ಮಾರುತಿ ಜೆರಾಕ್ಸ್ ತುಮಕೂರು ಇವರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.*

ಶ್ರೀ ಮಲ್ಲಿಕಾರ್ಜುನಾರಾಧ್ಯ.ಹೆಚ್.ಆರ್

ಉಪನ್ಯಾಸಕರು,

ಡಯಟ್, ತುಮಕೂರು

"ತುಮಕೂರು (ದಕ್ಷಿಣ) ಜಿಲ್ಲೆಯಲ್ಲಿ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q. R ಕೋಡ್ ಅನ್ನು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಬಳಸುತ್ತಿರುವ ವಿಷಯದ ಕುರಿತು ಶೈಕ್ಷಣಿಕ ಅಧ್ಯಯನ"

ಮಾರ್ಗದರ್ಶಕರ ತಂಡ

ಕ್ರ.ಸಂ	ಹೆಸರು	ವಿಳಾಸ
1	ಶ್ರೀ ಕೆ. ಮಂಜುನಾಥ	ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು, ಡಯಟ್ ತುಮಕೂರು
2	ಶ್ರೀ. ಡಾ// ಆರ್. ರುದ್ರಾರಾಧ್ಯ	ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾ ವಿದ್ಯಾಲಯ, ತುಮಕೂರು
3	ಶ್ರೀ ಶ್ರೀಧರ್. ಎ	ಹಿರಿಯ ಉಪನ್ಯಾಸಕರು, ಡಯಟ್ ತುಮಕೂರು
4	ಶ್ರೀಮತಿ ಮಂಗಳ ಗೌರಮ್ಮ	ಹಿರಿಯ ಉಪನ್ಯಾಸಕರು, ಡಯಟ್ ತುಮಕೂರು
5	ಶ್ರೀ ಮಹಮ್ಮದ್ ಹುಸೇನ್ ಫೀರ್	ಉಪನ್ಯಾಸಕರು, ಡಯಟ್ ತುಮಕೂರು

ಸಹಕಾರ

ಅಧ್ಯಯನ ಕಾರ್ಯಕ್ಕೆ ಸಹಕಾರ ನೀಡಿದ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು, ಆಯ್ದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯಶಿಕ್ಷಕರು, ಸಹ ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ಅಭಿವಂದನೆಗಳು.

ಪರಿವಿಡಿ

ಕ್ರ.ಸಂ	ಅಧ್ಯಾಯಗಳು	ಪುಟ ಸಂಖ್ಯೆ
1	ಪ್ರಸ್ತಾವನೆ	7-13
2	ಅಧ್ಯಯನದ ವಿಧಾನ	14-18
3	ಅಧ್ಯಯನದ ಹಂತಗಳು	19
4	ದತ್ತಾಂಶಗಳ ವಿವರಣೆ ಮತ್ತು ಅರ್ಥೈಸುವಿಕೆ	20-66
5	ಅಧ್ಯಯನದ ಸಾರಾಂಶ ಮತ್ತು ಉಪಸಂಹಾರ	67-85

ಅಧ್ಯಾಯ-1
ಪ್ರಸ್ತಾವನೆ

"ತುಮಕೂರು (ದಕ್ಷಿಣ) ಜಿಲ್ಲೆಯಲ್ಲಿ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q. R ಕೋಡ್ ಅನ್ನು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಬಳಸುತ್ತಿರುವ ವಿಷಯದ ಕುರಿತು ಶೈಕ್ಷಣಿಕ ಅಧ್ಯಯನ"

ಈ ಅಧ್ಯಯನದ ಪ್ರಸ್ತಾವನೆಯು ಕೆಳಗಿನ ಅಂಶಗಳನ್ನು ಒಳಗೊಂಡಿದೆ

1.1 : ಪೀಠಿಕೆ

1.2 : ಅಧ್ಯಯನದ ಹಿನ್ನೆಲೆ

1.3 : ಅಧ್ಯಯನದ ಅಗತ್ಯತೆ

1.4 : ಅಧ್ಯಯನದ ಉದ್ದೇಶಗಳು

1.5 : ಸಂಶೋಧನಾ ಪ್ರಶ್ನೆಗಳು

1.6 : ಆಧಾರ ಕಲ್ಪನೆಗಳು

1.7 : ಅಧ್ಯಾಯೀಕರಣ

1.1 : ಪೀಠಿಕೆ

Q. R ಕೋಡ್ ಎಂಬುದು, Quick Response Code ಎಂಬುದರ ಸಂಕ್ಷಿಪ್ತ ರೂಪ. ಇದು ನಾಲ್ಕು ಬಗೆಯ ಪ್ರಮಾಣಿಕೃತ ಸಂಕೇತಗಳನ್ನು ಬಳಸಿ ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಳ್ಳುತ್ತದೆ. ಅವುಗಳೆಂದರೆ, 1) ನ್ಯೂಮರಿಕ್ (ಸಂಖ್ಯಾ) 2) ಆಲ್ಫಾನ್ಯೂಮರಿಕ್ (ಅಕ್ಷರ ಮತ್ತು ಸಂಖ್ಯೆ ಒಳಗೊಂಡ) 3) ಬೈಟ್/ಬೈನರಿ ಮತ್ತು 4) ಕಾಂಜಿ, Q.R ಕೋಡ್‌ನಲ್ಲಿ ಬಿಳಿ ಬಣ್ಣದ ಹಿನ್ನೆಲೆಯಲ್ಲಿ ಕಪ್ಪು ಬಣ್ಣದ ಚೌಕಾಕಾರದ ಚಿಕ್ಕ ಚಿಕ್ಕ ರಚನೆಗಳು, ಒಂದು ಚೌಕಾಕಾರದ ಕಟ್ಟಿನಲ್ಲಿ ವ್ಯವಸ್ಥೆಗೊಂಡಿರುತ್ತವೆ. ಇದನ್ನು ಸೂಕ್ತ ತಂತ್ರಾಂಶಗಳನ್ನು ಹೊಂದಿರುವ ಸ್ಮಾರ್ಟ್ ಫೋನ್ ಕ್ಯಾಮೆರಾದಂತಹ ಉಪಕರಣಗಳ ಮೂಲಕ ಓದಬಹುದು, ಅದರಲ್ಲಿ ಸಂಗ್ರಹಗೊಂಡಿರುವ ಬೇಕಾದ ಮಾಹಿತಿಯನ್ನು ತೆಗೆದುಕೊಳ್ಳಬಹುದು.

ಈಗ ಸ್ಮಾರ್ಟ್ ಫೋನುಗಳಲ್ಲಿ ಪಠ್ಯವನ್ನು ತೋರಿಸಲು, ಪಠ್ಯ ಪುಸ್ತಕಗಳಲ್ಲಿ Q.R ಕೋಡ್‌ಗಳನ್ನು ಬಳಸಲಾಗುತ್ತಿದೆ. ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಪಠ್ಯ ಪುಸ್ತಕಗಳು ಮಹತ್ವದ ಸ್ಥಾನವನ್ನು ಹೊಂದಿವೆ. ಪಠ್ಯಪುಸ್ತಕಗಳು ಶಿಕ್ಷಕರಿಗೆ ಬೋಧನಾ ಚಟುವಟಿಕೆ ಕೈಗೊಳ್ಳಲು ಹಾಗೂ ವಿದ್ಯಾರ್ಥಿಗಳಿಗೆ ಕಲಿಕಾ ಅಭ್ಯಾಸಕ್ಕೆ ನೆರವು ಕಲ್ಪಿಸುತ್ತವೆ. ಪಠ್ಯಪುಸ್ತಕಗಳಲ್ಲಿ ಅನೇಕ ವಿಷಯಗಳ ಕುರಿತು ಮಾಹಿತಿ, ಅಂಕಿ ಅಂಶಗಳು, ಚಿತ್ರಗಳು, ಆಕೃತಿಗಳು ಇರುವುದು ಸಾಮಾನ್ಯ, ಆದರೆ ಪಠ್ಯಪುಸ್ತಕಗಳಲ್ಲಿ ಪಾಠಕ್ಕೆ ಸಂಬಂಧಿಸಿದ ಆಕರ್ಷಕ ವಿಡಿಯೋಗಳೂ ಸಹ ಲಭ್ಯವಾಗುವಂತಿದ್ದರೆ ಎಷ್ಟು ಚೆಂದ ಅಲ್ಲವೇ.

1.2 : ಅಧ್ಯಯನದ ಹಿನ್ನೆಲೆ

Q. R ಕೋಡ್ ಎಂಬುದು, Quick Response Code ಎಂಬುದರ ಸಂಕ್ಷಿಪ್ತ ರೂಪ. ಜಪಾನಿನಲ್ಲಿ ಮೊಟ್ಟ ಮೊದಲ ಬಾರಿಗೆ ಆಟೋಮೋಟಿವ್ ಕೈಗಾರಿಕೆಗೋಸ್ಕರ Q.R ಕೋಡನ್ನು ತಯಾರಿಸಲಾಯಿತು. Q.R ಕೋಡ್ ವ್ಯವಸ್ಥೆಯನ್ನು 1994 ರಲ್ಲಿ ಜಪಾನಿನ ಡೆನ್ಸೊವೇವ್ ಕಂಪನಿಯ ಮಸಾಹಿರೋಹರಾ ಎಂಬುವವರು ಕಂಡುಹಿಡಿದರು. ವಾಹನಗಳ ಮತ್ತು ಭಾಗಗಳ ತಯಾರಿಕೆಯಲ್ಲಿ ಜಾಡು ಹಿಡಿಯುವುದು (ಟ್ರ್ಯಾಕಿಂಗ್) ಇದರ ಉದ್ದೇಶವಾಗಿತ್ತು. ಕಾಲಕ್ರಮೇಣ ಈ Q.R. ಕೋಡ್ ವ್ಯವಸ್ಥೆಯು ಹೊರ ಜಗತ್ತಿಗೂ ಕೂಡ ಜನಪ್ರಿಯವಾಯಿತು. ಇದಕ್ಕೆ ಕಾರಣ ಇದರ ಸುಲಭ ಓದುವಿಕೆ ಮತ್ತು ಮಾಮೂಲಿ ಬಾರ್ ಕೋಡ್ ಗಳಿಗಿಂತ ಒಳ್ಳೆಯ ರೀತಿಯಲ್ಲಿ ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಳ್ಳುವ ಸಾಮರ್ಥ್ಯವಿದೆ.

ಪ್ರಸ್ತುತ ಲಭ್ಯವಿರುವ ತಂತ್ರಜ್ಞಾನದ ಲಾಭವನ್ನು ಪಡೆದುಕೊಂಡು, ಮೊಬೈಲ್, ಡೆಸ್ಕ್ ಟಾಪ್ ಗಳಲ್ಲಿ ಕಲಿಕಾ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಉಪಕ್ರಮವಾದ Digital Infrastructure for Knowledge Sharing DIKSHA ಕಾರ್ಯಕ್ರಮಕ್ಕೆ ಅನುಗುಣವಾಗಿ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯು ಕಾರ್ಯಪ್ರವೃತ್ತವಾಗಿದೆ. ಈಗಾಗಲೇ ತಮಿಳುನಾಡು, ಆಂದ್ರ ಪ್ರದೇಶ, ರಾಜಸ್ಥಾನ, ಉತ್ತರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಈ ಕಾರ್ಯಕ್ರಮ ಪ್ರಾರಂಭಗೊಂಡಿದೆ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯವೂ ಸಹ ಪಠ್ಯ ಪುಸ್ತಕಗಳಲ್ಲಿ ಡಿಜಿಟಲ್ ಸಂಪನ್ಮೂಲಗಳನ್ನು ಅಳವಡಿಸುವ ಕುರಿತು ಕ್ರಮಗಳನ್ನು ಕೈಗೊಂಡಿದೆ. 2019-20 ನೇ ಸಾಲಿನಿಂದ ಪಠ್ಯ ಪುಸ್ತಕಗಳನ್ನು Energized Text Books (ETB) ಗಳನ್ನಾಗಿ ರೂಪಿಸಿದೆ. ವಿಷಯವಾರು ಲಭ್ಯವಿರುವ ಮತ್ತು ಶಿಕ್ಷಕರು ಸಿದ್ಧಪಡಿಸಿರುವ ಇ-ಸಂಪನ್ಮೂಲಗಳ ವಿಡಿಯೋಗಳು, ಅಂತರ್ ಕ್ರಿಯಾತ್ಮಕ ಚಟುವಟಿಕೆಗಳು, ಪಿ.ಡಿ.ಎಫ್ ರೂಪದಲ್ಲಿ ಪ್ರಶ್ನೆಪತ್ರಿಕೆಗಳನ್ನು ಪರಿಶೀಲನೆ ಮತ್ತು ಪರಿಷ್ಕರಣೆ ನಂತರ DIKSHA ಪೋರ್ಟಲ್‌ಗೆ ಅಪ್ಲೋಡ್ ಮಾಡಲಾಗಿದೆ. 2019-20 ನೇ ಸಾಲಿನಿಂದ Energized ಪಠ್ಯ ಪುಸ್ತಕಗಳನ್ನು ಇ-ಸಂಪನ್ಮೂಲಗಳನ್ನು ಲಿಂಕ್ ಮಾಡಿದ Q.R ಕೋಡ್ ಸಹಿತ ಪಠ್ಯ ಪುಸ್ತಕಗಳನ್ನು ಕರ್ನಾಟಕ ಸರ್ಕಾರವು ಅನುಷ್ಠಾನಗೊಳಿಸಿದೆ.

ಸದರಿ e-ಸಂಪನ್ಮೂಲಗಳನ್ನು ಶಿಕ್ಷಕರು ಮತ್ತು ಮಕ್ಕಳು ಬಳಸಿಕೊಳ್ಳುತ್ತಿರುವ ಬಗ್ಗೆ ಪರಿಶೀಲಿಸಿ ಮಾರ್ಗದರ್ಶನ ನೀಡುವ ಹಿನ್ನೆಲೆಯಲ್ಲಿ ಸದರಿ ಅಧ್ಯಯನವನ್ನು ಕೈಗೊಂಡಿದೆ.

1.3 : ಅಧ್ಯಯನದ ಅಗತ್ಯತೆ

- *Q. R ಕೋಡ್ ಅನ್ನು ಬಳಸುವುದರಿಂದ ಪರಿಕಲ್ಪನೆಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು.*
- *ತರಗತಿಯಲ್ಲಿರುವ ವಿವಿಧ ಕಲಿಕಾ ಸಾಮರ್ಥ್ಯ ವುಳ್ಳ ವಿದ್ಯಾರ್ಥಿಗಳಿಗೆ ಆಯಾ ಹಂತದ ಕಲಿಕಾ ಸಂಪನ್ಮೂಲಗಳನ್ನು ರೂಪಿಸಬಹುದು.*
- *ಮೊಬೈಲ್ ಮೂಲಕ ಶೈಕ್ಷಣಿಕ ಸಂಪನ್ಮೂಲಗಳನ್ನು ಸುಲಭವಾಗಿ ಪಡೆಯಬಹುದು.*
- *ವಿದ್ಯಾರ್ಥಿಗಳ ಕಲಿಕೆ ದೃಢೀಕರಣವಾಗುತ್ತದೆ.*
- *ಶಿಕ್ಷಕರಿಗೆ, ಇ-ಸಂಪನ್ಮೂಲಗಳು ಅತಿ ಶೀಘ್ರದಲ್ಲಿ ಲಭ್ಯವಾಗಲಿವೆ.*
- *ಬೋಧನ-ಕಲಿಕೆ ಪ್ರಕ್ರಿಯೆಯು ತಂತ್ರಜ್ಞಾನದಲ್ಲಿ ಬಳಕೆಯಾಗುತ್ತದೆ.*
- *ಕಲಿಕೆಯನ್ನು ಆಸಕ್ತಿದಾಯಕವನ್ನಾಗಿಸಬಹುದು.*
- *ಬೋಧನೆಯು ಆಕರ್ಷಕವಾಗಿರುತ್ತದೆ.*
- *ಇ-ಸಂಪನ್ಮೂಲಗಳನ್ನು ಶಿಕ್ಷಕರು ತಮ್ಮ ಅಗತ್ಯತೆಗೆ ತಕ್ಕಂತೆ ಬಳಸಿಕೊಳ್ಳಬಹುದು.*
- *ವಿದ್ಯಾರ್ಥಿಗಳು, ಶಿಕ್ಷಕರು, ಸಮುದಾಯ ಇವರು ಹಲವು ರಾಜ್ಯಗಳ ಸಂಪನ್ಮೂಲಗಳನ್ನು ಬೆರಳ ತುದಿಯಲ್ಲಿ ಪಡೆದುಕೊಳ್ಳಬಹುದು.*
- *ಪಠ್ಯವಸ್ತುವಿಗೆ ಸೀಮಿತವಾಗದೆ, ವಿವಿಧ ಕ್ಷೇತ್ರಗಳಲ್ಲಿ Q. R ಕೋಡ್ ಬಳಕೆಯ ವಿವರವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಬಹುದು.*
- *ವಿದ್ಯಾರ್ಥಿಗಳು ತಂತ್ರಜ್ಞಾನದ ಕೌಶಲವನ್ನು ಬೆಳೆಸಿಕೊಳ್ಳಬಹುದು.*

ಸದರಿ ಅಂಶಗಳನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮನನ ಮಾಡಿಕೊಂಡು e-ಸಂಪನ್ಮೂಲಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸುವಂತೆ ಪ್ರೇರಣೆ ಮತ್ತು ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಈ ಅಧ್ಯಯನವು ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ.

1.4 : ಅಧ್ಯಯನದ ಉದ್ದೇಶಗಳು

- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರು, ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡನ್ನು ಎಷ್ಟರ ಮಟ್ಟಿಗೆ ಅರ್ಥೈಸಿಕೊಂಡಿದ್ದಾರೆ ಎಂಬುದನ್ನು ತಿಳಿಯುವುದು.
- ಶಿಕ್ಷಕರು ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡನ್ನು ನಿರೀಕ್ಷಿತ ಮಟ್ಟದಲ್ಲಿ ಬಳಸುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸುವುದು.
- ವಿದ್ಯಾರ್ಥಿಗಳು, ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡನ್ನು ಬಳಸುವ ನಿಟ್ಟಿನಲ್ಲಿ ಶಿಕ್ಷಕರು ಸೂಕ್ತ ಮಾಹಿತಿ ಮತ್ತು ಮಾರ್ಗದರ್ಶನ ನೀಡಿದ್ದಾರೆಯೇ ಎಂಬುದನ್ನು ಪರಿಶೀಲಿಸುವುದು.
- ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q.R ಕೋಡನ್ನು ಬಳಸುವ ಸಂದರ್ಭದಲ್ಲಿ ಉಂಟಾಗುವ ತಾಂತ್ರಿಕ ತೊಡಕುಗಳನ್ನು ಅಧ್ಯಯನ ಮಾಡಿ ಪರಿಹಾರ ಕಂಡುಕೊಳ್ಳುವುದು.
- ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ನಿತ್ಯ ವ್ಯವಹಾರಿಕ ಜೀವನದಲ್ಲಿ Q. R ಕೋಡ್ ಅನ್ನು ಬಳಸುತ್ತಿರುವ ಬಗ್ಗೆ ಹಿಮ್ಮಾಹಿತಿಯನ್ನು ಪಡೆಯಬಹುದು.
- ಮುಖ್ಯಶಿಕ್ಷಕರು ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್‌ನ ಬಗ್ಗೆ ತಿಳಿದಿದ್ದು, ಇದರ ಬಳಕೆ ಬಗ್ಗೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಮೇಲ್ವಿಚಾರಣೆ ಮಾಡುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸುವುದು.

1.5 : ಸಂಶೋಧನಾ ಪ್ರಶ್ನೆಗಳು

- ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್ ಬಗ್ಗೆ ಮಾಹಿತಿ ಇದೆಯೇ ?
- ಶಿಕ್ಷಕರು ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್ ಅನ್ನು ನಿರೀಕ್ಷಿತ ಮಟ್ಟದಲ್ಲಿ ಬಳಸುತ್ತಿದ್ದಾರೆಯೇ ?
- ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್ ಬಗ್ಗೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಸೂಕ್ತ ಮಾಹಿತಿ ಮತ್ತು ಮಾರ್ಗದರ್ಶನ ನೀಡಿದ್ದಾರೆಯೇ ?
- ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್ ಬಳಸುವಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ತೊಡಕುಗಳು ಉಂಟಾಗುತ್ತಿವೆಯೇ ?
- ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರಿಗೆ ನಿತ್ಯ ವ್ಯವಹಾರಿಕ ಜೀವನದಲ್ಲಿ Q. R ಕೋಡ್ ಅನ್ನು ಬಳಸುತ್ತಿರುವುದರ ಬಗ್ಗೆ ಮಾಹಿತಿ ಇದೆಯೇ ?
- ಮುಖ್ಯಶಿಕ್ಷಕರು, ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್ ಅನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಬಳಸುತ್ತಿರುವುದನ್ನು ಮೇಲ್ವಿಚಾರಣೆ ಮಾಡುತ್ತಿದ್ದಾರೆಯೇ ?

1.6 : ಆಧಾರ ಕಲ್ಪನೆಗಳು

- ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q.R ಕೋಡ್ ಅನ್ನು ಅರ್ಥ ಮಾಡಿಕೊಂಡಿರುತ್ತಾರೆ.
- ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳು ಮತ್ತು ಶಿಕ್ಷಕರು, ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡನ್ನು ಸಮರ್ಪಕವಾಗಿ ಬಳಸುತ್ತಿದ್ದಾರೆ.
- ಎಲ್ಲಾ ಸರ್ಕಾರಿ ಮತ್ತು ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪಠ್ಯ ಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡನ್ನು ಸಮರ್ಪಕವಾಗಿ ಬಳಸುವ ತಂತ್ರಜ್ಞಾನದ ಪರಿಚಯವನ್ನು ಹೊಂದಿರುತ್ತಾರೆ.
- ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಶಿಕ್ಷಕರು ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕದಲ್ಲಿ ಅಳವಡಿಸಲಾಗಿರುವ Q.R ಕೋಡನ್ನು ಬಳಸುವ ನಿಟ್ಟಿನಲ್ಲಿ ಸೂಕ್ತ ಮಾಹಿತಿ ಮತ್ತು ಮಾರ್ಗದರ್ಶನ ನೀಡಿದ್ದಾರೆ.
- ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಮುಖ್ಯಶಿಕ್ಷಕರು, ಪಠ್ಯ ಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಮರ್ಪಕವಾಗಿ ಬಳಸುತ್ತಿರುವುದನ್ನು ನಿರಂತರವಾಗಿ ಪರಿಶೀಲಿಸುತ್ತಿದ್ದಾರೆ.

1.7 : ಅಧ್ಯಾಯೀಕರಣ

ಈ ವಸ್ತುಸ್ಥಿತಿ ಅಧ್ಯಯನವನ್ನು 5 ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಅವುಗಳ ವಿವರ ಈ ಕೆಳಗಿನಂತಿದೆ.

(1) ಅಧ್ಯಯನದ ವಿಧಾನ

ಈ ಅಧ್ಯಾಯದಲ್ಲಿ ಸಮಸ್ಯೆಯ ನಿರೂಪಣೆ, ಪದಗಳ ವಿವರಣೆ, ಅಧ್ಯಾಯದ ವ್ಯಾಪ್ತಿ ಮತ್ತು ಮಿತಿಗಳು, ನಮೂನೆಯ ವಿಧಾನ, ದತ್ತಾಂಶ ಸಂಗ್ರಹಣೆಗೆ ಬಳಸಲಾದ ಸಾಧನ ಮತ್ತು ತಂತ್ರಗಳು, ದತ್ತಾಂಶ ವಿಶ್ಲೇಷಣೆಗೆ ಬಳಸಲಾದ ಸಾಂಖ್ಯಿಕ ವಿಧಾನ, ಅಧ್ಯಯನದ ಅವಧಿ ಮತ್ತು ಅಂದಾಜು ವೆಚ್ಚಗಳ ಬಗ್ಗೆ ವಿವರಿಸಲಾಗಿದೆ.

(2) ಅಧ್ಯಯನದ ಹಂತಗಳು

ಶಿಕ್ಷಕ ಶಿಕ್ಷಣ ಯೋಜನೆ ಅಡಿಯಲ್ಲಿ ಮಾನ್ಯ ನಿರ್ದೇಶಕರು DSERT ಬೆಂಗಳೂರು, ಇವರ ಆದೇಶಾನುಸಾರ ಮತ್ತು ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ತುಮಕೂರು, ಇವರ ಮಾರ್ಗದರ್ಶನದಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಅಧ್ಯಯನವನ್ನು ಪ್ರಾರಂಭಿಸಲು ನಡೆದು ಬಂದ ಉಪಕ್ರಮಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

(3) ದತ್ತಾಂಶಗಳು ಮತ್ತು ಅರ್ಥೈಸುವಿಕೆ

ಈ ಅಧ್ಯಾಯದಲ್ಲಿ ಸಂಗ್ರಹಿಸಲಾದ ದತ್ತಾಂಶಗಳು ಮತ್ತು ಅರ್ಥೈಸುವಿಕೆಯ ಮಾಹಿತಿಯಿಂದ ಹೊರಬಂದ ಫಲಿತಾಂಶಗಳನ್ನು ಕೋಷ್ಟಕ, ಸ್ತಂಭಾಲೇಖ ರಚಿಸುವ ಮೂಲಕ ಸೂಕ್ತವಾದ ವಿವರಣೆಯನ್ನು ವಿಶ್ಲೇಷಣೆಯೊಂದಿಗೆ ವಿವರಿಸಲಾಗಿದೆ.

(4) ಅಧ್ಯಯನದ ಸಾರಾಂಶ ಮತ್ತು ಉಪಸಂಹಾರ

ಈ ಅಧ್ಯಾಯದಲ್ಲಿ ಅಂತಿಮವಾಗಿ , ಈ ಅಧ್ಯಾಯದಿಂದ ಹೊರಬಂದ ಸಾರಾಂಶ ಮತ್ತು ಫಲಿತಾಂಶಗಳು ಹಾಗೂ ಅಗತ್ಯವಾದ ಸಲಹೆಗಳನ್ನು ನೀಡಲಾಗಿದೆ.

ಅಧ್ಯಾಯ-2
ಅಧ್ಯಯನದ ವಿಧಾನಗಳು

2020-21 ನೇ ಸಾಲಿನಲ್ಲಿ ತುಮಕೂರು (ದ) ಜಿಲ್ಲೆಯ ಆರೂ ತಾಲ್ಲೂಕುಗಳಿಂದ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಆಯ್ಕೆ ಮಾಡಿಕೊಂಡು, ಪ್ರತಿ ತಾಲ್ಲೂಕಿನಿಂದ 2 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು 2 ಪ್ರೌಢಶಾಲೆಳಂತೆ ಪ್ರತಿ ತಾಲ್ಲೂಕಿನಿಂದ ಒಟ್ಟು 4 ಶಾಲೆಗಳಂತೆ, 6 ತಾಲ್ಲೂಕುಗಳಿಂದ 24 ಶಾಲೆಗಳನ್ನು ಆಯ್ಕೆ ಮಾಡಿಕೊಂಡು ವಿದ್ಯಾರ್ಥಿಗಳು, ಸಹ ಶಿಕ್ಷಕರು, ಮುಖ್ಯಶಿಕ್ಷಕರು ಹಾಗೂ ಪೋಷಕರನ್ನು ಅಧ್ಯಯನ ಕಾರ್ಯದಲ್ಲಿ ಬಳಸಿಕೊಳ್ಳಲಾಗಿದೆ.

ಅಧ್ಯಯನದ ವಿಧಾನಗಳು ಈ ಕೆಳಗಿನ ಅಂಶಗಳನ್ನು ಒಳಗೊಂಡಿವೆ.

2.1 : ಪೀಠಿಕೆ

2.2 : ಸಮಸ್ಯೆಯ ನಿರೂಪಣೆ

2.3 : ಪದಗಳ ವಿವರಣೆ

2.4 : ಅಧ್ಯಯನದ ವ್ಯಾಪ್ತಿ ಮತ್ತು ಮಿತಿಗಳು

2.5 : ಅಧ್ಯಯನದ ಸಾಧನ ಮತ್ತು ತಂತ್ರಗಳು

2.6 : ದತ್ತಾಂಶ ಸಂಗ್ರಹಣೆಯ ಹಂತಗಳು

2.7 : ದತ್ತಾಂಶ ವಿಶ್ಲೇಷಣೆಗೆ ಬಳಸಲಾದ ಸಾಂಖ್ಯಿಕ ವಿಧಾನ

2.1 : ಪೀಠಿಕೆ

ಅಧ್ಯಯನ ಅಥವಾ ಸಂಶೋಧನೆ ಎಂಬುದು ಜ್ಞಾನದ ಸಲುವಾಗಿ ನಡೆಸುವ ಹುಡುಕಾಟ ಎಂದು ಅರ್ಥೈಸಬಹುದು. ಒಂದು ವೈಜ್ಞಾನಿಕ ಪದ್ಧತಿಯಂತೆ ಹೊಸ ಸಮಸ್ಯೆಗಳಿಗೆ ಹೊಸ ಹೊಸ ಪರಿಹಾರಗಳನ್ನು ಕಂಡುಕೊಳ್ಳುವುದಾಗಿದೆ. ಇದರ ಮೂಲಕ ಹೊಸ ಸಿದ್ಧಾಂತಗಳನ್ನು ಅಭಿವೃದ್ಧಿ ಪಡಿಸುವುದೇ ಸಂಶೋಧನೆಯ ಅಥವಾ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

2.2 : ಸಮಸ್ಯೆಯ ನಿರೂಪಣೆ

2020-21 ನೇ ಸಾಲಿನಲ್ಲಿ, ಆರೂ ತಾಲ್ಲೂಕುಗಳಿಂದ ಪ್ರತಿ ತಾಲ್ಲೂಕಿಗೆ 4 ಶಾಲೆಗಳಂತೆ 24 ಶಾಲೆಗಳನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q. R ಕೋಡ್ ಅನ್ನು ಬಳಸುತ್ತಿರುವ ವಿಷಯವನ್ನು ತಿಳಿಯುವುದಕ್ಕಾಗಿ ಈ ಕೆಳಗಿನ ಶೀರ್ಷಿಕೆಯಂತೆ ಅಧ್ಯಯನದ ಸಮಸ್ಯೆಯ ನಿರೂಪಣೆ ಮಾಡಲಾಗಿದೆ.

2.3 : ಪದಗಳ ವಿವರಣೆ

ಈ ಅಧ್ಯ್ಯಯನ ಶೀರ್ಷಿಕೆ ಅಡಿಯಲ್ಲಿ ಬಳಸಲಾದ ಪದಗಳ ವಿವರಣೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ತುಮಕೂರು (ದ) ಶೈಕ್ಷಣಿಕ ಜಿಲ್ಲೆಯು 6 ತಾಲ್ಲೂಕುಗಳನ್ನು ಹೊಂದಿದೆ. ಚಿಕ್ಕನಾಯಕನಹಳ್ಳಿ, ಗುಬ್ಬಿ, ಕುಣಿಗಲ್, ತಿಪಟೂರು, ತುಮಕೂರು ಮತ್ತು ತುರುವೇಕೆರೆ.

ಶಾಲೆ : ವಿದ್ಯಾರ್ಥಿಗಳು ಕಲಿಯುವ ಸ್ಥಳ ಮತ್ತು ಕಲಿಯುವ ವಾತಾವರಣವನ್ನು ಒದಗಿಸಲು ವಿನ್ಯಾಸಗೊಳಿಸಲಾದ ಶಿಕ್ಷಣ ಸಂಸ್ಥೆಯನ್ನು ಶಾಲೆ ಎಂದು ಕರೆಯಲಾಗುವುದು.

ಅಧ್ಯಯನ : ಒಂದು ನಿರ್ದಿಷ್ಟ ವಿಷಯ, ಪ್ರದೇಶ, ವಸ್ತು ಮತ್ತು ಇನ್ನೂ ಮುಂತಾದವುಗಳ ಬಗ್ಗೆ ಒಂದು ನಿರ್ದಿಷ್ಟ ಸಮಯದಲ್ಲಿ ಕೈಗೊಳ್ಳುವ ಸಂಶೋಧನೆಗೆ ಅಧ್ಯಯನ ಎನ್ನಬಹುದು.

Q.R ಕೋಡ್ : Quick Response Code ಎಂದು ಅರ್ಥ. ಇದು ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಳ್ಳುತ್ತದೆ. ಇದು ಬಿಳಿ ಮತ್ತು ಕಪ್ಪು ಬಣ್ಣದ ಚೌಕಾಕಾರದ ರಚನೆಯಿಂದ ಕೂಡಿರುತ್ತದೆ.

2.4 : ಅಧ್ಯಯನದ ವ್ಯಾಪ್ತಿ ಮತ್ತು ಮಿತಿಗಳು

ಅಧ್ಯಯನದ ವ್ಯಾಪ್ತಿಯು 2020-21 ನೇ ಸಾಲಿನಲ್ಲಿ ಆರೂ ತಾಲ್ಲೂಕುಗಳಿಂದ ಆಯ್ದ 2 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಂದು ನಗರ ಮತ್ತೊಂದು ಗ್ರಾಮೀಣ ಹಾಗೂ 2 ಸರ್ಕಾರಿ ಪ್ರೌಢಶಾಲೆಗಳಲ್ಲಿ ಒಂದು ನಗರ, ಮತ್ತೊಂದು ಗ್ರಾಮೀಣ, ಒಟ್ಟು 24 ಶಾಲೆಗಳು ಮಾತ್ರ ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ.

2.5 : ಅಧ್ಯಯನದ ಸಾಧನ ಮತ್ತು ತಂತ್ರಗಳು

ಅಧ್ಯಯನಕ್ಕೆ ಪೂರಕವಾದ ಮಾಹಿತಿ ಸಂಗ್ರಹಣೆಗೆ ಸಾಧನವಾದ ಪ್ರಶ್ನಾವಳಿಯನ್ನು ಮತ್ತು ತಂತ್ರವಾಗಿ ಸಂದರ್ಶನವನ್ನು ಬಳಸಲಾಗಿದೆ.

ಅಧ್ಯಯನದ SAMPLE

ಕ್ರ.ಸಂ	ಜಿಲ್ಲೆಯ ಹೆಸರು	ಶಾಲಾ ಮುಖ್ಯಸ್ಥರು	ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು	ವಿದ್ಯಾರ್ಥಿಗಳು	ಪೋಷಕರು	ಒಟ್ಟು
1	ತುಮಕೂರು	24	48	96	24	192

2.6 : ದತ್ತಾಂಶ ಸಂಗ್ರಹಣೆಯ ಹಂತಗಳು

ಈ ಅಧ್ಯಯನದ ಮಾಹಿತಿ ಸಂಗ್ರಹಣೆಯನ್ನು ವಿವಿಧ ಹಂತಗಳಲ್ಲಿ ಮಾಡಬೇಕಾಗುತ್ತದೆ. ಮಾಹಿತಿ ಸಂಗ್ರಹಣಾ ವಿಧಾನವನ್ನು ಈ ಕೆಳಗಿನಂತೆ ಯೋಜನೆ ಮಾಡಿಕೊಳ್ಳಲಾಗಿದೆ.

- ಮೊಟ್ಟಮೊದಲು, ಅಧ್ಯಯನ ಪೂರ್ವದಲ್ಲಿ ಮಾರ್ಗದರ್ಶಕರನ್ನು ಗೊತ್ತುಪಡಿಸಿ - ಕೊಳ್ಳಲಾಯಿತು.
- ಅಧ್ಯಯನ ಕುರಿತಾಗಿ ಚರ್ಚಿಸಲು ಮಾರ್ಗದರ್ಶಕರೊಂದಿಗೆ ಡಯಟ್‌ನ ಉಪನ್ಯಾಸಕರು, ಹಿರಿಯ ಉಪನ್ಯಾಸಕರು ಸೇರಿದಂತೆ ಉಪನಿರ್ದೇಶಕರು (ಅಭಿವೃದ್ಧಿ) ಅವರ ಸಮ್ಮುಖದಲ್ಲಿ ಚರ್ಚಿಸಲಾಯಿತು.
- ಮಾರ್ಗದರ್ಶಕರ ಸಲಹೆಯಂತೆ ಅಧ್ಯಯನದ ಉದ್ದೇಶಗಳನ್ನು ನಿರ್ದಿಷ್ಟ - ಪಡಿಸಿಕೊಳ್ಳಲಾಯಿತು.
- ದತ್ತಾಂಶಗಳನ್ನು ಸಂಗ್ರಹಿಸಲು ಅನುಕೂಲವಾಗುವಂತೆ ಮತ್ತು ಅಧ್ಯಯನದ ಉದ್ದೇಶಗಳ ಈಡೇರಿಕೆಗಾಗಿ ಶಾಲಾ ಮುಖ್ಯಸ್ಥರು, ಸಹ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಕೇಳಬೇಕಾದ ಪ್ರಶ್ನಾವಳಿಗಳನ್ನು ಸಿದ್ಧಪಡಿಸಲಾಯಿತು.

2.7 : ದತ್ತಾಂಶ ವಿಶ್ಲೇಷಣೆಗೆ ಬಳಸಲಾದ ಸಾಂಖ್ಯಿಕ ವಿಧಾನ

ಈ ಮೇಲೆ ಸಿದ್ಧಪಡಿಸಿಕೊಂಡ ಪ್ರಶ್ನಾವಳಿಗಳನ್ನು ಶಾಲೆಗೆ ಸಂಬಂಧಿಸಿದ ಮುಖ್ಯಸ್ಥರು, ಸಹ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ನೀಡಿ, ಅವರಿಂದ ಉತ್ತರ ಪಡೆಯಲಾಯಿತು. ಸಂಗ್ರಹಿಸಿದ ದತ್ತಾಂಶಗಳನ್ನು ಬಳಸಿಕೊಂಡು ಪರಿಮಾಣಾತ್ಮಕ ವಿಶ್ಲೇಷಣೆ ಮಾಡಲಾಯಿತು. ಪರಿಮಾಣಾತ್ಮಕ ವಿಶ್ಲೇಷಣೆ ಮತ್ತು ದತ್ತಾಂಶ ಸಂಗ್ರಹಣೆಯ ಸಂದರ್ಭದಲ್ಲಿ ಪಡೆದ ಅನುಭವವನ್ನು ಆಧಾರವಾಗಿಟ್ಟುಕೊಂಡು ಈ ಅಧ್ಯಯನದ ಗುಣಾತ್ಮಕ ವಿಶ್ಲೇಷಣೆ ಮಾಡಲಾಗಿದೆ.

2.8 : ಅಧ್ಯಯನದ ಅವಧಿ

ಈ ಅಧ್ಯಯನವನ್ನು ಡಿಸೆಂಬರ್ 2020 ರಿಂದ ಪ್ರಾರಂಭಿಸಿ ಮೇ 2021 ರ ಒಳಗೆ ಅಧ್ಯಯನದ ವರದಿಯನ್ನು ಸಿದ್ಧಗೊಳಿಸಿದೆ.

- ಡಿಸೆಂಬರ್ 2020 ರ ಒಳಗೆ ಪ್ರಸ್ತಾವನೆಯನ್ನು ಸಲ್ಲಿಸಲಾಯಿತು.
- ಜನವರಿ 2021 ರ ಒಳಗೆ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಳ್ಳಲಾಯಿತು.
- ಮಾರ್ಚ್ ಅಂತ್ಯದೊಳಗಾಗಿ ಶಾಲೆಗಳನ್ನು ಸಂಪರ್ಕಿಸಿ ದತ್ತಾಂಶ ಸಂಗ್ರಹಣೆ ಮಾಡಲಾಯಿತು.
- ಮೇ 2021 ರ ಅಂತ್ಯದೊಳಗಾಗಿ ದತ್ತಾಂಶ ವಿಶ್ಲೇಷಣೆ ಹಾಗೂ ಅಧ್ಯಯನದ ವರದಿಯನ್ನು ಸಿದ್ಧಗೊಳಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ಅಧ್ಯಾಯ-3

ಅಧ್ಯಯನದ ಹಂತಗಳು

ಮಾನ್ಯ ನಿರ್ದೇಶಕರು, DSERT ಬೆಂಗಳೂರು ರವರ ಆದೇಶದ ಮೇರೆಗೆ ಹಾಗೂ ಮಾನ್ಯ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ತುಮಕೂರು ರವರ ಆದೇಶದಂತೆ

- ನವೆಂಬರ್ ತಿಂಗಳಲ್ಲಿ ಅಧ್ಯಯನದ ರೂಪುರೇಷೆಗಳನ್ನು ಸಿದ್ಧಪಡಿಸಿಕೊಳ್ಳಲಾಯಿತು.
- ನಂತರ ಮಾರ್ಗದರ್ಶಕರನ್ನು ಭೇಟಿ ಮಾಡಿ ಅಧ್ಯಯನದ ಬಗ್ಗೆ ಚರ್ಚಿಸಲಾಯಿತು.
- ಮಾರ್ಚಿ ಮಾಹೆಯಲ್ಲಿ ದತ್ತಾಂಶ ಸಂಗ್ರಹಿಸಲು ಅಗತ್ಯವಾದ ಸಾಧನ/ತಂತ್ರಗಳನ್ನು ಸಿದ್ಧಪಡಿಸಿಕೊಳ್ಳಲಾಯಿತು.
- ಈ ಅಧ್ಯಯನದ ಮಾರ್ಗದರ್ಶಕರಾದ ಶ್ರೀ ಡಾ|| ರುದ್ರಾರಾಧ್ಯ, ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾ ವಿದ್ಯಾಲಯ, ತುಮಕೂರು ಇವರಿಂದ ಅಗತ್ಯ ಸಾಧನ ಮತ್ತು ತಂತ್ರಗಳ ಬಗ್ಗೆ ಚರ್ಚಿಸಲಾಯಿತು ಹಾಗೂ ಮಾರ್ಗದರ್ಶನ ಮತ್ತು ಸಲಹೆಗಳನ್ನು ಪಡೆಯಲಾಯಿತು.
- ನಾಲ್ಕು ಹಂತದ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಂಡು ಮಾಹಿತಿ/ದತ್ತಾಂಶಗಳನ್ನು ಸಂಗ್ರಹಿಸಲಾಯಿತು.
- 6 ತಾಲ್ಲೂಕುಗಳ ಆಯ್ದ ಶಾಲೆಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಮೌಲ್ಯಮಾಪನಕ್ಕೆ ಒಳಪಡಿಸಿ ದಾಖಲೀಕರಣ ಮಾಡಲಾಗಿದೆ.
- ಪ್ರಶ್ನಾವಳಿಗಳಿಂದ ಬಂದ ಮಾಹಿತಿಯನ್ನು ಕ್ರೋಡೀಕರಿಸಿ ನಿಗದಿತ ಸೂಚ್ಯಾಂಕಗಳಿಗೆ ಪರಿವರ್ತಿಸಿ, ಪ್ರತೀ ಅಂಕಕ್ಕೂ ಶೇಕಡಾವಾರು ದತ್ತಾಂಶವನ್ನು ಕಂಡುಹಿಡಿದು ಸ್ತಂಭಾಲೇಖದ ಮೂಲಕ ವಿಶ್ಲೇಷಣೆ ಮಾಡಲಾಗಿದೆ.
- ವಿಶ್ಲೇಷಣೆ ಮೂಲಕ ಫಲಶೃತಿಯನ್ನು ಕಂಡು ಹಿಡಿಯಲಾಯಿತು.
- ವಿಶ್ಲೇಷಣೆಯಿಂದ ಕಂಡುಕೊಂಡ ಫಲಿತಾಂಶಗಳ ಆಧಾರದಿಂದ ಒಂದು ತೀರ್ಮಾನಕ್ಕೆ ಬರಲು ಅಥವಾ ಪರಿಹಾರ ಕಂಡುಕೊಳ್ಳಲು ಸಹಾಯಕವಾಗಿದೆ. ಗುರ್ತಿಸಿದ ಫಲಶೃತಿ ಅಂಶಗಳಿಗೆ ಪೂರಕವಾಗಿ ಅಗತ್ಯ ಸೂಕ್ತ ಮಾರ್ಗದರ್ಶನವನ್ನು ನೀಡಲಾಗಿದೆ.

ಅಧ್ಯಾಯ 4

ದತ್ತಾಂಶಗಳ ಗ್ರಾಫಿಕಲ್ ವಿಶ್ಲೇಷಣೆ

ಮುಖ್ಯಶಿಕ್ಷಕರ ಅಭಿಪ್ರಾಯಗಳ ವಿಶ್ಲೇಷಣೆ

ಮುಖ್ಯಶಿಕ್ಷಕರಿಗೆ ಸಂಬಂಧಿಸಿದ ಪ್ರಶ್ನಾವಳಿಗಳು

1) Q. R ಕೋಡ್ ನ ವಿಸ್ತೃತ ರೂಪ

i) Quick Reader ii) Quick Response iii) Quick Remember

ಶಾಲೆಯ ವಿಧ	ಅಭಿಪ್ರಾಯಪಟ್ಟ ಮುಖ್ಯಶಿಕ್ಷಕರ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	12	11	1	92%	8%
ಪ್ರೌಢಶಾಲೆ	12	12	0	100%	0%
ಒಟ್ಟು	24	23	1	96%	4%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 92 ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಮುಖ್ಯ ಶಿಕ್ಷಕರು ಸರಿ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 96 ರಷ್ಟು ಮುಖ್ಯಶಿಕ್ಷಕರು ಸರಿಯಾಗಿ ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಗಳ ಶೇ. 8 ರಷ್ಟು ಮುಖ್ಯಶಿಕ್ಷಕರಿಗೆ Q. R ಕೋಡ್ ನ ವಿಸ್ತೃತ ರೂಪ ತಿಳಿದಿರುವುದಿಲ್ಲ. ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಈ ಬಗ್ಗೆ ಮಾರ್ಗದರ್ಶನ ನೀಡುವ ಅಗತ್ಯವಿದೆ.

2) Q. R ಕೋಡ್ ಅನ್ನು ಯಾವ ತರಗತಿಯಿಂದ ಯಾವ ತರಗತಿಯವರಿಗೆ ಅಳವಡಿಸಲಾಗಿದೆ ?

i) 6 ರಿಂದ 8 ನೇ ತರಗತಿ ii) 6 ರಿಂದ 9 ನೇ ತರಗತಿ iii) 6 ರಿಂದ 10 ನೇ ತರಗತಿ

ಶಾಲೆಯ ವಿಧ	ಅಭಿಪ್ರಾಯಪಟ್ಟ ಮುಖ್ಯಶಿಕ್ಷಕರ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	12	11	1	92%	8%
ಪ್ರೌಢಶಾಲೆ	12	12	0	100%	0%
ಒಟ್ಟು	24	23	1	96%	4%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 92 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಮುಖ್ಯಶಿಕ್ಷಕರು ಸರಿ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 96 ರಷ್ಟು ಮುಖ್ಯಶಿಕ್ಷಕರು ಸರಿಯಾಗಿ ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಗಳ ಕೆಲವು ಮುಖ್ಯಶಿಕ್ಷಕರಿಗೆ Q. R ಕೋಡ್ ಅನ್ನು ಯಾವ ತರಗತಿಯಿಂದಯಾವ ತರಗತಿಯವರೆಗೆ ಅಳವಡಿಸಲಾಗಿದೆ ಎಂಬುದನ್ನು ತಿಳಿಯುವ ಅವಶ್ಯಕತೆಯಿದೆ.

ಮುಖ್ಯಶಿಕ್ಷಕರು ಈ ಬಗ್ಗೆ ಗಮನ ಹರಿಸಿ Q.R ಕೋಡ್ ಅನ್ನು 6 ರಿಂದ 10 ನೇ ತರಗತಿಯವರೆಗೆ ಅಳವಡಿಸಲಾಗಿದೆ ಎಂದು ತಿಳಿಯುವುದು ಅವಶ್ಯವಿದೆ.

3) Q. R ಕೋಡ್ ಅನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡಿರುವಿರಾ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಮುಖ್ಯಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	12	0	100%	0%
ಪ್ರೌಢಶಾಲೆ	12	12	0	100%	0%
ಒಟ್ಟು	24	24	0	100%	0%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 100 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 100 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಎಲ್ಲಾ ಮುಖ್ಯಶಿಕ್ಷಕರು Q. R ಕೋಡ್‌ಅನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಶಿಕ್ಷಕರುಗಳಿಗೆ ಸೂಕ್ತ ಮಾರ್ಗದರ್ಶನ ನೀಡಿದ್ದಾರೆ ಎಂದು ತಿಳಿದು ಬರುತ್ತದೆ.

4) ಶಿಕ್ಷಕರು ಮೊಬೈಲ್ ಮೂಲಕ Q. R ಕೋಡ್ ಸ್ಕ್ಯಾನ್ ಮಾಡಿ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ತೋರಿಸುತ್ತಿರುವುದನ್ನು ಗಮನಿಸಿದ್ದೀರಾ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಮುಖ್ಯಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	11	1	92%	8%
ಪ್ರೌಢಶಾಲೆ	12	12	0	100%	0%
ಒಟ್ಟು	24	23	1	96%	4%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 92 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 96 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಸಾಕಷ್ಟು ಪ್ರಾಥಮಿಕ ಶಾಲಾ ಶಿಕ್ಷಕರು ಮೊಬೈಲ್ ಮೂಲಕ Q. R ಕೋಡ್‌ಅನ್ನು ಸ್ಕ್ಯಾನ್ ಮಾಡಿ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಿರುವುದನ್ನು ಮುಖ್ಯಶಿಕ್ಷಕರು ಗಮನಿಸಿರುವುದಿಲ್ಲ ಎಂದು ತಿಳಿದು ಬರುತ್ತದೆ. ಮುಖ್ಯಶಿಕ್ಷಕರು ಈ ಬಗ್ಗೆ ಗಮನ ಹರಿಸಿ, ಶಿಕ್ಷಕರು ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಿರುವುದರ ಬಗ್ಗೆ ಮೇಲ್ವಿಚಾರಣೆ ಮಾಡುವುದು ಅತ್ಯವಶ್ಯಕವಾಗಿದೆ.

5) ವಿದ್ಯಾರ್ಥಿಗಳು Q.R ಕೋಡ್ ಬಳಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡಿರುವಿರಾ ?
(ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಮುಖ್ಯಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	5	7	42%	58%
ಪ್ರೌಢಶಾಲೆ	12	7	5	58%	42%
ಒಟ್ಟು	24	12	12	50%	50%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 42 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 58 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 50 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಮುಖ್ಯಶಿಕ್ಷಕರು Q. R ಕೋಡ್‌ಅನ್ನು ವಿದ್ಯಾರ್ಥಿಗಳು ಬಳಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡುತ್ತಿಲ್ಲವೆಂದು ತಿಳಿದು ಬರುತ್ತದೆ.

ಆದ ಕಾರಣ ಮುಖ್ಯಶಿಕ್ಷಕರು , ವಿದ್ಯಾರ್ಥಿಗಳು Q. R ಕೋಡ್‌ಅನ್ನು ಬಳಸುತ್ತಿರುವುದನ್ನು ಮೇಲ್ವಿಚಾರಣೆ ಮಾಡುವುದು ಅತಿ ಮುಖ್ಯವಾಗಿರುತ್ತದೆ.

6) ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್ ಬಳಕೆಯಿಂದ ಮಕ್ಕಳ ಕಲಿಕೆಯಲ್ಲಿ ಪ್ರಗತಿಯಾಗಿರುವುದನ್ನು ಖಾತ್ರಿಪಡಿಸಿಕೊಂಡಿದ್ದೀರಾ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ ಮುಖ್ಯಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	5	7	4%	58%
ಪ್ರೌಢಶಾಲೆ	12	9	3	75%	25%
ಒಟ್ಟು	24	14	10	58%	42%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 42 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 75 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 58 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪಠ್ಯ ಪುಸ್ತಕದಲ್ಲಿ ಅಳವಡಿಸಿರುವ Q. R ಕೋಡ್‌ನ ಬಳಕೆಯಿಂದ ವಿದ್ಯಾರ್ಥಿಗಳ ಕಲಿಕೆಯಲ್ಲಿ ಉಂಟಾಗಿರುವ ಪ್ರಗತಿಯನ್ನು ಸಾಕಷ್ಟು ಮುಖ್ಯಶಿಕ್ಷಕರು ಖಾತ್ರಿಪಡಿಸಿಕೊಂಡಿಲ್ಲ ಎಂದು ತಿಳಿದು ಬರುತ್ತದೆ.

Q. R ಕೋಡ್‌ನ ಬಳಕೆಯಿಂದ ವಿದ್ಯಾರ್ಥಿಗಳ ಕಲಿಕೆಯಲ್ಲಿ ಯಾವ ರೀತಿ ಪ್ರಗತಿ ಉಂಟಾಗಿದೆ ಎಂಬುದನ್ನು ಮುಖ್ಯಶಿಕ್ಷಕರು ಖಾತ್ರಿಪಡಿಸಿಕೊಂಡು ಮಾರ್ಗದರ್ಶನ ನೀಡುವುದು ಅಗತ್ಯವಾಗಿದೆ.

7) Q. R ಕೋಡ್ ಬಳಸುವ ನಿಟ್ಟಿನಲ್ಲಿ ತಾಂತ್ರಿಕ ದೋಷಗಳನ್ನು ಗುರುತಿಸಿ ಶಿಕ್ಷಕರೊಂದಿಗೆ ಚರ್ಚೆ ಮಾಡಿದ್ದೀರಾ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಮುಖ್ಯಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	8	4	67%	33%
ಪ್ರೌಢಶಾಲೆ	12	10	2	83%	17%
ಒಟ್ಟು	24	18	6	75%	25%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 67 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 83 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 75 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಮುಖ್ಯಶಿಕ್ಷಕರು Q. R ಬಳಸುವ ನಿಟ್ಟಿನಲ್ಲಿ ಉಂಟಾಗುವ ತಾಂತ್ರಿಕ ದೋಷಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿರುವುದಿಲ್ಲ ಎಂಬುದು ಕಂಡು ಬರುತ್ತದೆ.

ಮುಖ್ಯಶಿಕ್ಷಕರು ತಪ್ಪದೇ Q. R ಬಳಸುವ ನಿಟ್ಟಿನಲ್ಲಿ ಉಂಟಾಗುವ ತಾಂತ್ರಿಕ ದೋಷಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ ಸೂಕ್ತ ಮಾರ್ಗದರ್ಶನ ನೀಡಿ ಸಮಸ್ಯೆ ಪರಿಹರಿಸಬೇಕಾಗುತ್ತದೆ.

8) Q. R ಕೋಡ್ ಬಳಕೆಯ ಬಗ್ಗೆ ಮಾಹಿತಿಯನ್ನು ಪೋಷಕರ ಗಮನಕ್ಕೆ ತರಲಾಗಿದೆಯೇ ?
(ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಮುಖ್ಯಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	11	1	92%	8%
ಪ್ರೌಢಶಾಲೆ	12	9	3	75%	25%
ಒಟ್ಟು	24	20	4	83%	17%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 92 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 75 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 83 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರೌಢಶಾಲೆಗಳ ಅತಿ ಹೆಚ್ಚಿನ ಮುಖ್ಯಶಿಕ್ಷಕರು Q. R ಕೋಡ್ ಬಳಕೆಯ ಬಗ್ಗೆ ಮಾಹಿತಿಯನ್ನು ಪೋಷಕರ ಗಮನಕ್ಕೆ ತಂದಿರುವುದಿಲ್ಲ ಎಂಬುದು ಸ್ಪಷ್ಟವಾಗಿದೆ.

ಪ್ರತೀ ಶಾಲೆಯ ಮುಖ್ಯಶಿಕ್ಷಕರುಗಳು Q.R ಕೋಡ್ ಬಳಕೆಯ ಬಗ್ಗೆ ಮಾಹಿತಿಯನ್ನು ಪೋಷಕರ ಗಮನಕ್ಕೆ ತಂದು, ಅದರ ಉಪಯೋಗಗಳ ಬಗ್ಗೆ ತಿಳಿಸಿ ವಿದ್ಯಾರ್ಥಿಗಳ ಕಲಿಕಾ ಪ್ರಗತಿಗೆ ಸಹಕರಿಸಬೇಕಾಗುತ್ತದೆ.

9) ಶೈಕ್ಷಣಿಕ ಮೇಲ್ವಿಚಾರಣೆ ಮಾಡುವ ಮೂಲಕ e-ಸಂಪನ್ಮೂಲ ಬಳಕೆ ಕುರಿತಂತೆ ಪರಿಶೀಲಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡಿದ್ದೀರಾ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಮುಖ್ಯಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	8	4	67%	33%
ಪ್ರೌಢಶಾಲೆ	12	9	3	75%	25%
ಒಟ್ಟು	24	17	7	71%	29%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 67 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 75 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 71 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಗಳ ಅತಿ ಹೆಚ್ಚಿನ ಮುಖ್ಯಶಿಕ್ಷಕರು e-ಸಂಪನ್ಮೂಲಗಳ ಬಳಕೆಯ ಕುರಿತಂತೆ ಪರಿಶೀಲಿಸಿ ಶಿಕ್ಷಕರಿಗೆ ಮಾರ್ಗದರ್ಶನ ಮಾಡದೆ ಇರುವುದು ತಿಳಿದು ಬರುತ್ತದೆ. ಪ್ರತೀ ಶಾಲೆಯ ಮುಖ್ಯಶಿಕ್ಷಕರುಗಳು ಶೈಕ್ಷಣಿಕ ಮೇಲ್ವಿಚಾರಣೆ ನಡೆಸಿ e-ಸಂಪನ್ಮೂಲಗಳ ಬಳಕೆಯ ಬಗ್ಗೆ

ಪರಿಶೀಲಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು ಅತ್ಯಂತ ಅವಶ್ಯಕವಾಗಿದೆ.

10) ಪ್ರಸ್ತುತ ದೈನಂದಿನ ವ್ಯವಹಾರಿಕ ಜೀವನದಲ್ಲಿ Q. R ಕೋಡ್ ಬಳಸುತ್ತಿರುವ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮಾರ್ಗದರ್ಶನ ನೀಡಿರುವಿರಾ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಮುಖ್ಯಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	10	2	83%	17%
ಪ್ರೌಢಶಾಲೆ	12	10	2	83%	17%
ಒಟ್ಟು	24	20	4	83%	17%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 83 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 83 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 83 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಹೆಚ್ಚಿನ ಶಾಲೆಗಳ ಮುಖ್ಯಶಿಕ್ಷಕರು ದೈನಂದಿನ ವ್ಯವಹಾರದಲ್ಲಿ Q.R ಕೋಡ್ ಬಳಸುತ್ತಿರುವ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಮಾರ್ಗದರ್ಶನ ನೀಡಿದ್ದಾರೆ ಎಂಬುದು ತಿಳಿದು ಬರುತ್ತದೆ.

ಇನ್ನೂ ಕೆಲವು ಶಾಲೆಯ ಮುಖ್ಯಶಿಕ್ಷಕರುಗಳು ದೈನಂದಿನ ವ್ಯವಹಾರಿಕ ಜೀವನದಲ್ಲಿ Q. R ಕೋಡ್‌ನ ಮಹತ್ವದ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಮಾರ್ಗದರ್ಶನ ನೀಡುವ ಅಗತ್ಯತೆ ಇದೆ.

ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಅಭಿಪ್ರಾಯಗಳ ವಿಶ್ಲೇಷಣೆ

ಶಿಕ್ಷಕರಿಗೆ ಸಂಬಂಧಿಸಿದ ಪ್ರಶ್ನಾವಳಿಗಳು

1) Q. R ಕೋಡ್ ಅನ್ನು ಪಠ್ಯಪುಸ್ತಕದಲ್ಲಿ ಅಳವಡಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	24	24	0	100%	0%
ಪ್ರೌಢಶಾಲೆ	24	24	0	100%	0%
ಒಟ್ಟು	48	48	0	100%	0%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 100 ರಷ್ಟು ಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಎಲ್ಲಾ ಶಿಕ್ಷಕರಿಗೂ ಪಠ್ಯ ಪುಸ್ತಕದಲ್ಲಿ ಅಳವಡಿಸಿರುವ Q. R ಕೋಡ್‌ನ ಬಗ್ಗೆ ತಿಳಿದಿದೆ ಎಂಬುದು ಸ್ಪಷ್ಟವಾಗುತ್ತದೆ.

2) Q. R ಕೋಡ್ ನ ವಿಸ್ತೃತ ರೂಪ

i) Quick Reader ii) Quick Response iii) Quick Remember

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	24	24	0	100%	0%
ಪ್ರೌಢಶಾಲೆ	24	24	0	100%	0%
ಒಟ್ಟು	48	48	0	100%	0%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಸರಿಯಾದ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 100 ರಷ್ಟು ಶಿಕ್ಷಕರು ಸರಿಯಾಗಿ ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಎಲ್ಲಾ ಶಿಕ್ಷಕರಿಗೂ Q. R ಕೋಡ್‌ನ ವಿಸ್ತೃತ ರೂಪ ತಿಳಿದಿದೆ ಎಂದು ಸ್ಪಷ್ಟವಾಗುತ್ತದೆ.

3) Q. R ಕೋಡ್ ಅನ್ನು ಯಾವ ತರಗತಿಯಿಂದ ಯಾವ ತರಗತಿಯವರಿಗೆ ಅಳವಡಿಸಲಾಗಿದೆ ?

i) 6 ರಿಂದ 8 ನೇ ತರಗತಿ ii) 6 ರಿಂದ 9 ನೇ ತರಗತಿ iii) 6 ರಿಂದ 10 ನೇ ತರಗತಿ

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	24	20	4	83%	17%
ಪ್ರೌಢಶಾಲೆ	24	21	3	88%	12%
ಒಟ್ಟು	48	41	7	85%	15%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 83 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 88 ರಷ್ಟು ಶಿಕ್ಷಕರು ಸರಿಯಾದ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 85 ರಷ್ಟು ಶಿಕ್ಷಕರು ಸರಿಯಾಗಿ ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, Q. R ಕೋಡ್‌ನ್ನು ಯಾವ ತರಗತಿಯಿಂದ ಯಾವ ತರಗತಿಯ ಪಠ್ಯ ಪುಸ್ತಕಗಳಲ್ಲಿ ಅಳವಡಿಸಲಾಗಿದೆ ಎಂದು ಇನ್ನೂ ಕೆಲವು ಶಿಕ್ಷಕರಿಗೆ ಸರಿಯಾಗಿ ತಿಳಿದಿರುವುದಿಲ್ಲ ಎಂಬುದು ಕಂಡುಬರುತ್ತದೆ. ಆದ ಕಾರಣ ಮುಖ್ಯಶಿಕ್ಷಕರ ಮಾರ್ಗದರ್ಶನದೊಂದಿಗೆ ಎಲ್ಲಾ ಶಿಕ್ಷಕರು ಈ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವಿದೆ.

4) Q. R ಕೋಡ್ ಅನ್ನು ಯಾವ ಯಾವ ವಿಷಯಗಳಿಗೆ ಅಳವಡಿಸಲಾಗಿದೆ ?

i) ಕನ್ನಡ, ಉರ್ದು, ಹಿಂದಿ ii) ಕನ್ನಡ, ಸಂಸ್ಕೃತ, ಹಿಂದಿ iii) ವಿಜ್ಞಾನ, ಗಣಿತ, ಇಂಗ್ಲೀಷ್

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	24	23	1	95%	5%
ಪ್ರೌಢಶಾಲೆ	24	24	0	100%	0%
ಒಟ್ಟು	48	47	1	98%	2%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 95 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಸರಿಯಾದ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 98 ರಷ್ಟು ಶಿಕ್ಷಕರು ಸರಿಯಾಗಿ ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, Q. R ಕೋಡ್‌ನ್ನು ಯಾವ ಯಾವ ವಿಷಯದ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ ಎಂದು ಇನ್ನೂ ಕೆಲವು ಶಿಕ್ಷಕರಿಗೆ ಸರಿಯಾಗಿ ತಿಳಿದಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

ಆದ ಕಾರಣ ಎಲ್ಲಾ ಶಿಕ್ಷಕರು ಈ ಬಗ್ಗೆ ತಿಳಿದುಕೊಳ್ಳುವ ಅಗತ್ಯವಿದೆ.

5) ಯಾವ ಆಪ್ ಅನ್ನು ಬಳಸಿ ಸ್ಮಾರ್ಟ್ ಫೋನ್ ಮೂಲಕ Q.R ಕೋಡ್ ನಲ್ಲಿರುವ e – ಸಂಪನ್ಮೂಲಗಳನ್ನು ಡೌನ್ಲೋಡ್ ಮಾಡಿಕೊಳ್ಳಬಹುದು ?

i) ವಿನ್ ಸ್ಕಾರ್ ii) ದೀಕ್ಷಾ iii) ಝೂಮ್

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	24	24	0	100%	0%
ಪ್ರೌಢಶಾಲೆ	24	24	0	100%	0%
ಒಟ್ಟು	48	48	0	100%	0%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಸರಿಯಾದ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 100 ರಷ್ಟು ಶಿಕ್ಷಕರು ಸರಿಯಾಗಿ ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಎಲ್ಲಾ ಶಿಕ್ಷಕರಿಗು ದೀಕ್ಷಾ ಆಪ್‌ಅನ್ನು ಬಳಸಿ e-ಸಂಪನ್ಮೂಲಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ತಿಳಿದಿದೆ ಎಂಬುದು ಅರ್ಥವಾಗುತ್ತದೆ.

6) ನೀವು ಗಮನಿಸಿದಂತೆ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್ ಈ ಆಕಾರದಲ್ಲಿರುತ್ತದೆ.

i) ತ್ರಿಭುಜ ii) ಚೌಕ iii) ಆಯತ

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	24	22	2	92%	8%
ಪ್ರೌಢಶಾಲೆ	24	24	0	100%	0%
ಒಟ್ಟು	48	46	2	96%	4%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 92 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಸರಿಯಾದ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 96 ರಷ್ಟು ಶಿಕ್ಷಕರು ಸರಿಯಾಗಿ ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಯ ಕೆಲವು ಶಿಕ್ಷಕರಿಗೆ Q. R ಕೋಡ್ ಯಾವ ಆಕಾರದಲ್ಲಿದೆ ಎಂದು ತಿಳಿದಿಲ್ಲವೆಂಬುದು ಸ್ಪಷ್ಟವಾಗಿದೆ. ಈ ವಿಷಯದ ಬಗ್ಗೆ ಗಮನ ಹರಿಸಿ Q. R ಕೋಡ್‌ನ ಆಕಾರ ಹಾಗೂ ಅನುಕೂಲತೆಗಳ ಬಗ್ಗೆ ಶಿಕ್ಷಕರು ತಿಳಿದುಕೊಳ್ಳಲು ಪ್ರಯತ್ನಿಸಬೇಕಾಗಿದೆ.

7) ಹಿಂದಿನ ಪಠ್ಯ ಪುಸ್ತಕಗಳಿಗಿಂತ ಪ್ರಸ್ತುತ Q. R ಕೋಡ್ ಅಳವಡಿಸಿರುವ ಪಠ್ಯಪುಸ್ತಕಗಳ ಪರಿಣಾಮಕತೆ

i) ಉಪಯುಕ್ತ ii) ಸಾಧಾರಣ iii) ನಿರುಪಯುಕ್ತ

ಶಾಲೆಯ ವಿಧ	ಅಭಿಪ್ರಾಯ ಪಟ್ಟ ಶಿಕ್ಷಕರ ಸಂಖ್ಯೆ	ಉಪಯುಕ್ತ	ಸಾಧಾರಣ	ನಿರುಪಯುಕ್ತ	ಉಪಯುಕ್ತ %	ಸಾಧಾರಣ %	ನಿರುಪಯುಕ್ತ %
ಪ್ರಾಥಮಿಕ ಶಾಲೆ	2	22	2	0	92%	8%	0%
ಪ್ರೌಢಶಾಲೆ	24	23	1	0	96%	4%	0%
ಒಟ್ಟು	48	45	3	0	94%	6%	0%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 92 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 96 ರಷ್ಟು ಶಿಕ್ಷಕರು Q. R ಕೋಡ್ ಅಳವಡಿಸಿರುವ ಪಠ್ಯಪುಸ್ತಕಗಳು ಹೆಚ್ಚು ಉಪಯುಕ್ತವಾಗಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 94 ರಷ್ಟು ಶಿಕ್ಷಕರು Q. R ಕೋಡ್ ಅಳವಡಿಸಿರುವ ಪಠ್ಯಪುಸ್ತಕಗಳು ಹೆಚ್ಚು ಉಪಯುಕ್ತವಾಗಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಇನ್ನೂ ಕೆಲವು ಶಿಕ್ಷಕರು Q. R ಕೋಡ್‌ನ ಉಪಯುಕ್ತತೆಯ ಬಗ್ಗೆ ತಿಳಿಯುವ ಅಗತ್ಯವಿದೆ.

8) Q. R ಕೋಡ್ ಅನ್ನು ಪ್ರಥಮವಾಗಿ ಆವಿಷ್ಕರಿಸಿ ಅಳವಡಿಸಿಕೊಂಡಿರುವ ದೇಶ

i) ಜರ್ಮನಿ ii) ಜಪಾನ್ iii) ಇಟಲಿ

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	24	23	1	96%	4%
ಪ್ರೌಢಶಾಲೆ	24	24	0	100%	0%
ಒಟ್ಟು	48	47	1	98%	2%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 96 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಸರಿಯಾದ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 98 ರಷ್ಟು ಶಿಕ್ಷಕರು ಸರಿಯಾಗಿ ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಯ ಕೆಲವು ಶಿಕ್ಷಕರಿಗೆ Q. R ಕೋಡ್ ಅನ್ನು ಯಾವ ದೇಶ ಪ್ರಥಮವಾಗಿ ಆವಿಷ್ಕರಿಸಿ ಅಳವಡಿಸಿಕೊಂಡಿದೆ ಎಂಬ ಬಗ್ಗೆ ಅರಿವು ಇಲ್ಲದಿರುವುದು ಕಂಡುಬರುತ್ತದೆ. ಆದ್ದರಿಂದ ಶಿಕ್ಷಕರು Q. R ಕೋಡ್‌ನ ಆವಿಷ್ಕಾರದ ಬಗ್ಗೆ ತಿಳಿದಿಕೊಳ್ಳಲು ಪ್ರಯತ್ನಿಸಬೇಕಿದೆ.

9) Q. R ಕೋಡ್ ನ ಬಳಕೆಯ ಬಗ್ಗೆ ಮಾಹಿತಿಯನ್ನು ಮಕ್ಕಳಿಗೆ ಮತ್ತು ಪೋಷಕರಿಗೆ ನೀಡಲಾಗಿದೆಯೇ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	24	23	1	96%	4%
ಪ್ರೌಢಶಾಲೆ	24	24	0	100%	0%
ಒಟ್ಟು	48	47	1	98%	2%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 96 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 98 ರಷ್ಟು ಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಯ ಕೆಲವು ಶಿಕ್ಷಕರು Q. R ಕೋಡ್‌ನ ಬಳಕೆಯ ಬಗ್ಗೆ ಮಾಹಿತಿಯನ್ನು ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ನೀಡಿಲ್ಲವೆಂದು ತಿಳಿದುಬರುತ್ತದೆ. ಆದ ಕಾರಣ ಶಿಕ್ಷಕರು ಈ ಬಗ್ಗೆ ಮಾಹಿತಿಯನ್ನು ತಿಳಿಸುವ ಅಗತ್ಯತೆ ಇದೆ.

10) ಮೊಬೈಲ್ ಮೂಲಕ Q. R ಕೋಡ್ ಸ್ಕ್ಯಾನ್ ಮಾಡಿ e – ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದ್ದೀರಾ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	24	15	9	63%	37%
ಪ್ರೌಢಶಾಲೆ	24	22	2	92%	8%
ಒಟ್ಟು	48	37	11	77%	23%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 63 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 92 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 77 ರಷ್ಟು ಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಸಂಖ್ಯೆಯ ಶಿಕ್ಷಕರು Q. R ಕೋಡ್ ಅನ್ನು ಸ್ಕ್ಯಾನ್ ಮಾಡಿ e-ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿರುವುದಿಲ್ಲ ಎಂಬುದು ತಿಳಿದು ಬರುತ್ತದೆ. ಶಿಕ್ಷಕರು ಈ ಬಗ್ಗೆ ಗಮನ ಹರಿಸಿ e-ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಪ್ರಯತ್ನಿಸುವ ಅವಶ್ಯಕತೆಯಿದೆ.

11) " Q. R ಕೋಡ್ ಅನ್ನು ಆನ್ಲೈನ್ ತರಬೇತಿಯಲ್ಲಿಯೂ ಉಪಯೋಗಿಸಬಹುದು " - ಈ ವಿಷಯ ಮನಗಂಡು ನೀವು ಪ್ರಯತ್ನಿಸಿರುವಿರಾ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	24	10	14	42%	58%
ಪ್ರೌಢಶಾಲೆ	24	13	11	54%	46%
ಒಟ್ಟು	48	23	25	48%	52%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 42 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 54 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 48 ರಷ್ಟು ಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಸಂಖ್ಯೆಯ ಶಿಕ್ಷಕರು Q. R ಕೋಡ್ ಅನ್ನು ಆನ್ಲೈನ್ ತರಗತಿಯಲ್ಲಿ Q. R ಕೋಡ್ಅನ್ನು ಉಪಯೋಗಿಸುವ ಬಗ್ಗೆ ತಿಳಿದುಕೊಂಡು ಪ್ರಯತ್ನಿಸಿರುವುದಿಲ್ಲ ಎಂಬುದನ್ನು ಗಮನಿಸಬಹುದು. ಈ ಬಗ್ಗೆ ಶಿಕ್ಷಕರು ಗಮನ ಹರಿಸಿ ಪ್ರಯತ್ನಿಸುವ ಕಾರ್ಯವನ್ನು ಮಾಡಬೇಕಾಗಿದೆ.

12) ಪ್ರಸ್ತುತ ದೈನಂದಿನ ವ್ಯವಹಾರಿಕ ಜೀವನದಲ್ಲಿ Q. R ಕೋಡ್ ಬಳಸುತ್ತಿರುವ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮಾರ್ಗದರ್ಶನ ನೀಡಿರುವಿರಾ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	24	9	15	38%	62%
ಪ್ರೌಢಶಾಲೆ	24	21	3	88%	12%
ಒಟ್ಟು	48	30	18	63%	37%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 38 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 88 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 63 ರಷ್ಟು ಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಸಂಖ್ಯೆಯ ಶಿಕ್ಷಕರು ದೈನಂದಿನ ಜೀವನದಲ್ಲಿ Q. R ಕೋಡ್ ಅನ್ನು ಬಳಸುತ್ತಿರುವ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಮಾರ್ಗದರ್ಶನ ನೀಡದಿರುವುದು ಸ್ಪಷ್ಟವಾಗಿದೆ.ಆದ ಕಾರಣ ಶಿಕ್ಷಕರು ಈ ಬಗ್ಗೆ ಮಾರ್ಗದರ್ಶನ ನೀಡುವ ಅನಿವಾರ್ಯತೆ ಇದೆ.

13) ವಿದ್ಯಾರ್ಥಿಗಳು Q. R ಕೋಡ್ ಬಳಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡಿರುವಿರಾ ?

(ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಶಿಕ್ಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	24	8	16	33%	67%
ಪ್ರೌಢಶಾಲೆ	24	21	3	88%	12%
ಒಟ್ಟು	48	29	19	60%	40%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 33 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 88 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 60 ರಷ್ಟು ಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಸಂಖ್ಯೆಯ ಶಿಕ್ಷಕರು ವಿದ್ಯಾರ್ಥಿಗಳು Q. R ಕೋಡ್ ಅನ್ನು ಬಳಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡದಿರುವುದು ತಿಳಿದು ಬರುತ್ತದೆ. ಆದ ಕಾರಣ ಶಿಕ್ಷಕರು Q.R ಕೋಡ್ ಅನ್ನು ವಿದ್ಯಾರ್ಥಿಗಳು ಬಳಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡಬೇಕಿದೆ.

ವಿದ್ಯಾರ್ಥಿಗಳ ಅಭಿಪ್ರಾಯಗಳ ವಿಶ್ಲೇಷಣೆ

ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಪ್ರಶ್ನಾವಳಿಗಳು

1) ನಿಮಗೆ Q. R ಕೋಡ್ ಬಗ್ಗೆ ತಿಳಿದಿದೆಯೇ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ವಿದ್ಯಾರ್ಥಿಗಳ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	48	48	0	100%	0%
ಪ್ರೌಢಶಾಲೆ	48	48	0	100%	0%
ಒಟ್ಟು	96	96	0	100%	0%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 100 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳಿಗೂ Q.R ಕೋಡ್‌ನ ಬಗ್ಗೆ ತಿಳಿದಿದೆ ಎಂದು ಅರ್ಥವಾಗುತ್ತದೆ.

2) Q. R ಕೋಡ್ ಅಂದರೆ i) Quick Reader ii) Quick Response iii) Quick Remember

ಶಾಲೆಯ ವಿಧ	ಅಭಿಪ್ರಾಯಪಟ್ಟ ವಿದ್ಯಾರ್ಥಿಗಳ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	48	40	8	83%	17%
ಪ್ರೌಢಶಾಲೆ	48	44	4	92%	8%
ಒಟ್ಟು	6	84	12	88%	12%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 83 ರಷ್ಟು ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 92 ರಷ್ಟು ವಿದ್ಯಾರ್ಥಿಗಳು ಸರಿಯಾದ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 88 ರಷ್ಟು ವಿದ್ಯಾರ್ಥಿಗಳು ಸರಿಯಾಗಿ ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಇನ್ನೂ ಸಾಕಷ್ಟು ವಿದ್ಯಾರ್ಥಿಗಳಿಗೆ Q. R ಕೋಡ್‌ನ ವಿಸ್ತೃತ ರೂಪ ಹಾಗೂ ಅದರ ಅರ್ಥ ತಿಳಿದಿರುವುದಿಲ್ಲ.

ಮುಖ್ಯಶಿಕ್ಷಕರು ಹಾಗೂ ಸಹಶಿಕ್ಷಕರುಗಳು ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿ, ವಿದ್ಯಾರ್ಥಿಗಳಿಗೆ Q.R ಕೋಡ್‌ನ ವಿಸ್ತೃತ ರೂಪ ಹಾಗೂ ಅದರ ಅರ್ಥವನ್ನು ತಿಳಿಸುವುದು ಅನಿವಾರ್ಯವಾಗಿದೆ.

3) Q. R ಕೋಡ್ ಅನ್ನು ಪಠ್ಯಪುಸ್ತಕದಲ್ಲಿ ಅಳವಡಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ವಿದ್ಯಾರ್ಥಿಗಳ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	48	47	1	98	2%
ಪ್ರೌಢಶಾಲೆ	48	48	0	100%	0%
ಒಟ್ಟು	96	95	1	99%	1%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 98 ರಷ್ಟು ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 99 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಗಳ ಕೆಲವು ವಿದ್ಯಾರ್ಥಿಗಳಿಗೆ Q. R ಕೋಡ್ ಅನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ ಬಗ್ಗೆ ಅರಿವು ಇರುವುದಿಲ್ಲ.

ಮುಖ್ಯಶಿಕ್ಷಕರು ಹಾಗೂ ಸಹಶಿಕ್ಷಕರುಗಳು ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿ, ವಿದ್ಯಾರ್ಥಿಗಳಿಗೆ Q.R ಕೋಡ್ ಅನ್ನು ಪಠ್ಯ ಪುಸ್ತಕಗಳಲ್ಲಿ ಅಳವಡಿಸಿರುವ ಬಗ್ಗೆ ಹಾಗೂ ಅದರ ಉಪಯೋಗದ ಬಗ್ಗೆ ಮನದಟ್ಟು ಮಾಡಿಕೊಡುವುದು ಅತ್ಯಗತ್ಯವಾಗಿದೆ.

4) ಈ ಕೆಳಗಿನ ಯಾವ ಪುಸ್ತಕದಲ್ಲಿ Q. R ಕೋಡ್ ಅಳವಡಿಸಲಾಗಿದೆ ?

i) ಅಭ್ಯಾಸ ಪುಸ್ತಕ ii) ಕಾಪಿ ಪುಸ್ತಕ iii) ಪಠ್ಯಪುಸ್ತಕ

ಶಾಲೆಯ ವಿಧ	ಅಭಿಪ್ರಾಯಪಟ್ಟ ವಿದ್ಯಾರ್ಥಿಗಳ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	4	45	3	94%	6%
ಪ್ರೌಢಶಾಲೆ	48	47	1	98%	2
ಒಟ್ಟು	96	92	4	96%	4%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 94 ರಷ್ಟು ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 98 ರಷ್ಟು ವಿದ್ಯಾರ್ಥಿಗಳು ಸರಿಯಾದ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 96 ರಷ್ಟು ವಿದ್ಯಾರ್ಥಿಗಳು ಸರಿ ಉತ್ತರ ನೀಡಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಕೆಲವು ವಿದ್ಯಾರ್ಥಿಗಳಿಗೆ Q. R ಕೋಡ್ ಅನ್ನು ಯಾವ ಪುಸ್ತಕಗಳಲ್ಲಿ ಅಳವಡಿಸಲಾಗಿದೆ ಎಂಬ ಗೊಂದಲವಿದೆ. ಈ ಗೊಂದಲವನ್ನು ಮುಖ್ಯಶಿಕ್ಷಕರು ಹಾಗೂ ಸಹಶಿಕ್ಷಕರುಗಳು Q.R ಕೋಡ್ ಅನ್ನು ಪಠ್ಯ ಪುಸ್ತಕಗಳಲ್ಲಿ ಅಳವಡಿಸಿರುವ ಬಗ್ಗೆ ತಿಳಿಸಿ ಮಕ್ಕಳ ಗೊಂದಲವನ್ನು ನಿವಾರಿಸಬಹುದಾಗಿದೆ.

5) ತರಗತಿ ಪ್ರಕ್ರಿಯೆಯಲ್ಲಿ ನಿಮ್ಮ ಶಿಕ್ಷಕರು Q.R ಕೋಡ್ ಬಳಸಿ e -–ಸಂಪನ್ಮೂಲಗಳನ್ನು ನಿಮಗೆ ಪರಿಚಯಿಸಿದ್ದಾರೆಯೇ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ವಿದ್ಯಾರ್ಥಿಗಳ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	48	42	6	88%	12%
ಪ್ರೌಢಶಾಲೆ	48	45	3	94%	6%
ಒಟ್ಟು	96	87	9	91%	9%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 88 ರಷ್ಟು ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 94 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 91 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಇನ್ನೂ ಕೆಲವು ವಿದ್ಯಾರ್ಥಿಗಳಿಗೆ Q. R ಕೋಡ್ ಅನ್ನು ಬಳಸಿ e-ಸಂಪನ್ಮೂಲಗಳನ್ನು ಪರಿಚಯಿಸದಿರುವುದು ಕಂಡುಬರುತ್ತದೆ. ಆದ ಕಾರಣ ಶಿಕ್ಷಕರುಗಳು ಅತ್ಯಂತ ಮುತುವರ್ಜಿ ವಹಿಸಿ ಎಲ್ಲಾ ವಿದ್ಯಾರ್ಥಿಗಳಿಗೂ Q.R ಕೋಡ್ ಅನ್ನು ಬಳಸಿ e-ಸಂಪನ್ಮೂಲಗಳನ್ನು ಪರಿಚಯಿಸುವ ಅವಶ್ಯಕತೆ ಇದೆ.

6) ತರಗತಿ ಪ್ರಕ್ರಿಯೆಯಲ್ಲಿ ನಿಮ್ಮ ಶಿಕ್ಷಕರು ಈ ಕೆಳಗಿನ ಯಾವ ವಿಷಯಗಳಲ್ಲಿ Q. R ಕೋಡ್ ಬಳಸಿ e – ಸಂಪನ್ಮೂಲಗಳನ್ನು ಪರಿಚಯಿಸಿದ್ದಾರೆ?

i) ಕನ್ನಡ, ಉರ್ದು, ಹಿಂದಿ ii) ಕನ್ನಡ, ಸಂಸ್ಕೃತ, ಹಿಂದಿ iii) ವಿಜ್ಞಾನ, ಗಣಿತ, ಇಂಗ್ಲೀಷ್

ಶಾಲೆಯ ವಿಧ	ಅಭಿಪ್ರಾಯಪಟ್ಟ ವಿದ್ಯಾರ್ಥಿಗಳ ಸಂಖ್ಯೆ	ಸರಿ	ತಪ್ಪು	ಸರಿ %	ತಪ್ಪು %
ಪ್ರಾಥಮಿಕ ಶಾಲೆ	08	48	0	100%	0%
ಪ್ರೌಢಶಾಲೆ	48	46	2	96%	4%
ಒಟ್ಟು	96	94	2	98%	2%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 100 ರಷ್ಟು ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 96 ರಷ್ಟು ವಿದ್ಯಾರ್ಥಿಗಳು ಸರಿಯಾದ ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 98 ರಷ್ಟು ವಿದ್ಯಾರ್ಥಿಗಳು ಸರಿಯಾದ ಉತ್ತರ ನೀಡಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರೌಢಶಾಲೆಯ ಸಾಕಷ್ಟು ವಿದ್ಯಾರ್ಥಿಗಳಿಗೆ ಯಾವ ವಿಷಯಗಳಲ್ಲಿ Q. R ಕೋಡ್ ಅನ್ನು ಅಳವಡಿಸಲಾಗಿದೆ ಎಂಬ ಗೊಂದಲವಿರುವುದು ತಿಳಿದು ಬರುತ್ತದೆ. ಆದ ಕಾರಣ ಶಿಕ್ಷಕರುಗಳು , Q.R ಕೋಡ್ ಅನ್ನು ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ವಿಷಯಗಳಲ್ಲಿ ಅಳವಡಿಸಿರುವ ಬಗ್ಗೆ ತಿಳಿಸಿ, e-ಸಂಪನ್ಮೂಲಗಳನ್ನು ಪರಿಚಯಿಸುವ ಅಗತ್ಯತೆ ಇದೆ.

7) ನಿಮ್ಮ ಶಾಲೆಯಲ್ಲಿ Q. R ಕೋಡ್ ನಲ್ಲಿರುವ e-ಸಂಪನ್ಮೂಲಗಳನ್ನು ಸಂಗ್ರಹಿಸಿಕೊಳ್ಳಲು ಪೂರಕವಾದ ಸೌಲಭ್ಯದ ಲಭ್ಯತೆ ಇದೆಯೇ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ವಿದ್ಯಾರ್ಥಿಗಳ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	48	23	25	48%	52%
ಪ್ರೌಢಶಾಲೆ	48	32	16	67%	33%
ಒಟ್ಟು	96	55	41	57%	43%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 48 ರಷ್ಟು ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 67 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 57 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚು ಶಾಲೆಗಳಲ್ಲಿ e-ಸಂಪನ್ಮೂಲಗಳನ್ನು ಸಂಗ್ರಹಿಸಲು ಪೂರಕವಾದ ಸೌಲಭ್ಯ ಇರುವುದಿಲ್ಲ ಎಂದು ತಿಳಿದುಬರುತ್ತದೆ.

ಮುಖ್ಯಶಿಕ್ಷಕರು ಈ ಬಗ್ಗೆ ಗಮನ ಹರಿಸಿ e-ಸಂಪನ್ಮೂಲಗಳನ್ನು ಸಂಗ್ರಹಿಸಲು ಪೂರಕವಾದ ಸೌಲಭ್ಯಗಳು ಶಾಲೆಯಲ್ಲಿ ಲಭ್ಯವಿರುವಂತೆ ನೋಡಿಕೊಳ್ಳಲು ಪ್ರಯತ್ನಿಸುವ ಅವಶ್ಯಕತೆಯಿದೆ.

8) ನಿಮ್ಮ ತರಗತಿ ಹಾಗೂ ವಿಷಯಗಳನ್ನು Q. R ಕೋಡ್ ನ ದೀಕ್ಷಾ ಆಪ್ ನಲ್ಲಿ ಸುಲಭವಾಗಿ ಹುಡುಕಲು ಪ್ರಯತ್ನಿಸಿರುವಿರಾ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ವಿದ್ಯಾರ್ಥಿಗಳ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	48	33	15	69%	31%
ಪ್ರೌಢಶಾಲೆ	48	45	3	94%	6%
ಒಟ್ಟು	96	78	22	81%	19%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 69 ರಷ್ಟು ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 94 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 81 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಗಳಲ್ಲಿನ ಸಾಕಷ್ಟು ವಿದ್ಯಾರ್ಥಿಗಳಿಗೆ ದೀಕ್ಷಾ ಆಪ್‌ನಲ್ಲಿ ವಿಷಯಾಧಾರಿತ e-ಸಂಪನ್ಮೂಲಗಳನ್ನು ಸುಲಭವಾಗಿ ಹುಡುಕಲು ಸಾಧ್ಯವಾಗುತ್ತಿಲ್ಲ ಎಂಬುದು ತಿಳಿದುಬರುತ್ತದೆ. ಮುಖ್ಯಶಿಕ್ಷಕರು ಹಾಗೂ ಸಹಶಿಕ್ಷಕರುಗಳು Q.R ಕೋಡ್‌ನ ಸಹಾಯದಿಂದ ದೀಕ್ಷಾ ಆಪ್‌ನಲ್ಲಿ ವಿಷಯವಾರು e-ಸಂಪನ್ಮೂಲಗಳನ್ನು ಸುಲಭವಾಗಿ ಹುಡುಕುವುದು ಹೇಗೆ ಎಂದು ತಿಳಿಸಿ ಕೊಡುವುದು ಅವಶ್ಯವಿದೆ.

9) ನೀವು Q R ಕೋಡ್ ಬಳಸುತ್ತಿರುವ ಬಗ್ಗೆ ಮುಖ್ಯಶಿಕ್ಷಕರು ಮೇಲ್ವಿಚಾರಣೆ ಮಾಡುತ್ತಿದ್ದಾರೆಯೇ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ವಿದ್ಯಾರ್ಥಿಗಳ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	48	23	25	48%	52%
ಪ್ರೌಢಶಾಲೆ	48	43	5	90%	10%
ಒಟ್ಟು	96	66	30	69%	31%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಕೇವಲ ಶೇ. 48 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿದ್ದಾರೆ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 90 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 69 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಗಳಲ್ಲಿ ಶೇ. 50 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು Q.R ಕೋಡ್ ಬಳಸುತ್ತಿರುವ ಬಗ್ಗೆ ಮುಖ್ಯಶಿಕ್ಷಕರು ಮೇಲ್ವಿಚಾರಣೆ ಮಾಡುತ್ತಿಲ್ಲ ಎಂದು ತಿಳಿಸಿರುತ್ತಾರೆ.

ಒಟ್ಟಾರೆ, ಅತಿ ಹೆಚ್ಚು ವಿದ್ಯಾರ್ಥಿಗಳ ಅಭಿಪ್ರಾಯದ ಪ್ರಕಾರ ಸಾಕಷ್ಟು ಮುಖ್ಯಶಿಕ್ಷಕರು Q. R ಕೋಡ್ ಬಳಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡುತ್ತಿಲ್ಲ ಎಂಬುದಾಗಿದೆ. ಆದ್ದರಿಂದ ಮುಖ್ಯಶಿಕ್ಷಕರ ಮೇಲ್ವಿಚಾರಣೆ ಅತ್ಯಗತ್ಯವಾಗಿದೆ.

10. Q. R ಕೋಡ್ ಬಳಸುವಾಗ ತಾಂತ್ರಿಕ ತೊಂದರೆಗಳು ಏನಾದರೂ ನಿಮಗೆ ಎದುರಾಗಿವೆಯೇ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ವಿದ್ಯಾರ್ಥಿಗಳ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	48	35	13	73%	27%
ಪ್ರೌಢಶಾಲೆ	48	29	19	60%	40%
ಒಟ್ಟು	96	64	32	67%	33%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಕೇವಲ ಶೇ. 73 ರಷ್ಟು ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 60 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 67 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿದ್ದಾರೆ. ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, Q.R ಕೋಡ್ ಬಳಸುವಾಗ ಸಾಕಷ್ಟು ತಾಂತ್ರಿಕ ತೊಂದರೆಗಳು ಉಂಟಾಗುತ್ತಿವೆ ಎಂದು ಹೆಚ್ಚಿನ ವಿದ್ಯಾರ್ಥಿಗಳು ತಿಳಿಸಿರುವುದು ಕಂಡುಬರುತ್ತದೆ.

ಮುಖ್ಯಶಿಕ್ಷಕರು ಈ ಬಗ್ಗೆ ಪರಿಶೀಲಿಸಿ, ತಾಂತ್ರಿಕ ತೊಂದರೆಗಳನ್ನು ಸರಿಪಡಿಸಿಕೊಳ್ಳಲು ಮಾರ್ಗದರ್ಶನ ನೀಡುವ ಅಗತ್ಯತೆಯಿದೆ.

ಪೋಷಕರ ಅಭಿಪ್ರಾಯಗಳ ವಿಶ್ಲೇಷಣೆ

ಪೋಷಕರಿಗೆ ಸಂಬಂಧಿಸಿದ ಪ್ರಶ್ನಾವಳಿಗಳು

1) ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್ ಬಗ್ಗೆ ನಿಮಗೆ ಮಾಹಿತಿ ಇದೆಯೇ ?
(ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಪೋಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	9	3	75%	25%
ಪ್ರೌಢಶಾಲೆ	12	12	0	100%	0%
ಒಟ್ಟು	24	21	3	88%	12%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 75 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿದ್ದಾರೆ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 88 ರಷ್ಟು ಪೋಷಕರು ಹೌದು ಎಂದು ಉತ್ತರಿಸಿದ್ದಾರೆ. ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಯ ಸಾಕಷ್ಟು ಪೋಷಕರಿಗೆ ಪಠ್ಯ ಪುಸ್ತಕದಲ್ಲಿ ಅಳವಡಿಸಿರುವ Q. R ಕೋಡ್‌ನ ಬಗ್ಗೆ ತಿಳಿದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದ ಕಾರಣ ಮುಖ್ಯಶಿಕ್ಷಕರು ಈ ಬಗ್ಗೆ ಗಮನ ಹರಿಸಿ ಪೋಷಕರಿಗೆ Q. R ಕೋಡ್‌ನ ಬಗ್ಗೆ ತಿಳಿಸಿಕೊಡುವ ಅಗತ್ಯತೆ ಇದೆ.

2) ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್ ಅನ್ನು ನಿಮ್ಮ ಮಕ್ಕಳು ಬಳಸುತ್ತಿರುವುದನ್ನು ಗಮನಿಸಿದ್ದೀರಾ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಪೋಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	4	8	33%	67%
ಪ್ರೌಢಶಾಲೆ	12	9	3	75%	25%
ಒಟ್ಟು	24	13	11	54%	46%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 33 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿದ್ದಾರೆ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 75 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 54 ರಷ್ಟು ಪೋಷಕರು ಹೌದು ಎಂದು ಉತ್ತರಿಸಿದ್ದಾರೆ. ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಪೋಷಕರು ಪಠ್ಯ ಪುಸ್ತಕದಲ್ಲಿ ಅಳವಡಿಸಿರುವ Q. R ಕೋಡ್ ಅನ್ನು ತಮ್ಮ ಮಕ್ಕಳು ಬಳಸುತ್ತಿರುವುದನ್ನು ಗಮನಿಸಿರುವುದಿಲ್ಲ ಎಂಬುದು ತಿಳಿದು ಬರುತ್ತದೆ.

ಆದ ಕಾರಣ ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ಎಲ್ಲಾ ಪೋಷಕರಿಗೆ ತಮ್ಮ ಮಕ್ಕಳು ಪಠ್ಯ ಪುಸ್ತಕದಲ್ಲಿ ಅಳವಡಿಸಿರುವ Q. R ಕೋಡ್ ಅನ್ನು ಬಳಸುತ್ತಿರುವ ಬಗ್ಗೆ ಗಮನಿಸುವಂತೆ ಮಾರ್ಗದರ್ಶನ ನೀಡಬೇಕಿದೆ.

3) ಪೋಷಕರ ಸಭೆಯಲ್ಲಿ ಶಿಕ್ಷಕರು/ಮುಖ್ಯಶಿಕ್ಷಕರು Q. R ಕೋಡ್ ಬಳಕೆಯ ಬಗ್ಗೆ ನಿಮ್ಮೊಂದಿಗೆ ಚರ್ಚಿಸಿದ್ದಾರೆಯೇ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಪೋಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	10	2	83%	17%
ಪ್ರೌಢಶಾಲೆ	12	10	2	83%	17%
ಒಟ್ಟು	24	20	4	83%	17%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 83 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 83 ರಷ್ಟು ಪೋಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಸಾಕಷ್ಟು ಮುಖ್ಯಶಿಕ್ಷಕರು/ ಶಿಕ್ಷಕರು ಪೋಷಕರ ಸಭೆಯಲ್ಲಿ Q.R ಕೋಡ್‌ನ ಬಳಕೆಯ ಬಗ್ಗೆ ಪೋಷಕರೊಂದಿಗೆ ಚರ್ಚಿಸಿಲ್ಲವೆಂಬುದು ಸ್ಪಷ್ಟವಾಗಿದೆ. ಆದ್ದರಿಂದ ಮುಖ್ಯಶಿಕ್ಷಕರು ಈ ಬಗ್ಗೆ ಪೋಷಕರ ಸಭೆಯಲ್ಲಿ ಚರ್ಚಿಸಿ, ಅವರಿಗೆ Q. R ಕೋಡ್‌ನ ಬಳಕೆಯ ಬಗ್ಗೆ ಮಾರ್ಗದರ್ಶನ ನೀಡುವ ಅವಶ್ಯಕತೆಯಿದೆ.

4) Q. R ಕೋಡ್ ಬಳಕೆಯ ತಂತ್ರಜ್ಞಾನದಿಂದ ದೈನಂದಿನ ವ್ಯವಹಾರವನ್ನು ಸರಳವಾಗಿ ನಡೆಸಬಹುದು ಎಂಬುದನ್ನು ನೀವು ಒಪ್ಪುವಿರಾ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಪೋಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	3	9	25%	75%
ಪ್ರೌಢಶಾಲೆ	12	7	5	58%	42%
ಒಟ್ಟು	24	10	14	42%	58%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 25 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿದ್ದಾರೆ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 58 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 42 ರಷ್ಟು ಪೋಷಕರು ಹೌದು ಎಂದು ಹಾಗೂ ಶೇ. 58 ರಷ್ಟು ಪೋಷಕರು ಇಲ್ಲ ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಸಂಖ್ಯೆಯ ಪೋಷಕರು Q. R ಕೋಡ್‌ನ ಬಳಕೆಯ ತಂತ್ರಜ್ಞಾನದಿಂದ ದೈನಂದಿನ ವ್ಯವಹಾರವನ್ನು ಸರಳವಾಗಿ ನಡೆಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣ Q. R ಕೋಡ್‌ನ ಬಳಕೆಯ ಬಗ್ಗೆ ಪೋಷಕರಿಗೆ ಅರಿವಿಲ್ಲದಿರುವುದು. ಈ ಬಗ್ಗೆ ಮುಖ್ಯಶಿಕ್ಷಕರು ಗಮನ ಹರಿಸಿ ಅವರಿಗೆ ದೈನಂದಿನ ವ್ಯವಹಾರದಲ್ಲಿ Q. R ಕೋಡ್‌ನ ಸರಳತೆಯ ಬಗ್ಗೆ ಅರಿವು ಮೂಡಿಸಬೇಕಾಗಿದೆ.

5) ನಿಮ್ಮ ಮಕ್ಕಳು ಶಾಲಾ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q.R ಕೋಡ್ ಸ್ವತ: ಬಳಸುತ್ತಿರುವ ಬಗ್ಗೆ ನಿಮಗೆ ಮಾಹಿತಿ ಇದೆಯೇ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಪೋಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	5	7	42%	58%
ಪ್ರೌಢಶಾಲೆ	12	6	6	50%	50%
ಒಟ್ಟು	24	11	13	46%	54%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 42 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿದ್ದಾರೆ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 50 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿರುತ್ತಾರೆ.

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 46 ರಷ್ಟು ಪೋಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಸಂಖ್ಯೆಯ ಪೋಷಕರಿಗೆ ತಮ್ಮ ಮಕ್ಕಳು ಪಠ್ಯಪುಸ್ತಕದಲ್ಲಿ ಅಳವಡಿಸಿರುವ Q. R ಕೋಡ್‌ನ್ನು ಸ್ವತ: ಬಳಸುತ್ತಿರುವ ಬಗ್ಗೆ ಅರಿವು ಇಲ್ಲ ಎಂಬುದು ತಿಳಿದು ಬರುತ್ತದೆ.

ಮುಖ್ಯಶಿಕ್ಷಕರು ಈ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಮಾಡಬೇಕಾಗಿದೆ.

6) ನಿತ್ಯ ಜೀವನದಲ್ಲಿ Q. R ಕೋಡ್ ಬಳಕೆಯ ಸಂದರ್ಭಗಳು ನಿಮ್ಮ ಅನುಭವಕ್ಕೆ ಬಂದಿವೆಯೇ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಪೋಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	7	5	58%	42%
ಪ್ರೌಢಶಾಲೆ	12	7	5	58%	42%
ಒಟ್ಟು	24	14	10	58%	42%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಪ್ರೌಢಶಾಲೆಗಳಲ್ಲಿ ತಲಾ ಶೇ. 58 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 58 ರಷ್ಟು ಪೋಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಸಂಖ್ಯೆಯ ಪೋಷಕರಿಗೆ ನಿತ್ಯ ಜೀವನದಲ್ಲಿ Q. R ಕೋಡ್‌ನ ಬಳಕೆಯ ಸಂದರ್ಭಗಳು ಅನುಭವಕ್ಕೆ ಬಂದಿಲ್ಲದಿರುವುದು ಕಂಡುಬರುತ್ತದೆ.

ಈ ಬಗ್ಗೆ ಮುಖ್ಯಶಿಕ್ಷಕರು/ಶಿಕ್ಷಕರು ಗಮನ ಹರಿಸಿ, ನಿತ್ಯ ಜೀವನದಲ್ಲಿ Q. R ಕೋಡ್‌ನ ಬಳಕೆಯ ಸಂದರ್ಭಗಳನ್ನು ಪೋಷಕರಿಗೆ ತಿಳಿಸಿಕೊಡುವ ಅಗತ್ಯತೆ ಇದೆ.

7) ಹಿಂದಿನ ಪಠ್ಯಪುಸ್ತಕಗಳಿಗಿಂತ ಪ್ರಸ್ತುತ Q. R ಕೋಡ್ ಅಳವಡಿಸಲಾಗಿರುವ ಪಠ್ಯಪುಸ್ತಕಗಳು ಪರಿಣಾಮಕಾರಿಯಾಗಿವೆಯೇ ? (ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಪೋಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	11	1	92%	8%
ಪ್ರೌಢಶಾಲೆ	12	11	1	92%	8%
ಒಟ್ಟು	24	22	2	92%	8%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಪ್ರೌಢಶಾಲೆಗಳಲ್ಲಿ ತಲಾ ಶೇ. 92 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 92 ರಷ್ಟು ಪೋಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಸಂಖ್ಯೆಯ ಪೋಷಕರು Q. R ಕೋಡ್ ಅಳವಡಿಸಲಾಗಿರುವ ಪಠ್ಯಪುಸ್ತಕಗಳು ಪರಿಣಾಮಕಾರಿಯಾಗಿವೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಕೆಲವು ಪೋಷಕರಿಗೆ ಈ ಪಠ್ಯಪುಸ್ತಕಗಳ ಪರಿಣಾಮಕತೆಯ ಬಗ್ಗೆ ಗೊಂದಲವಿರುವುದರಿಂದ ಮುಖ್ಯಶಿಕ್ಷಕರು Q. R ಕೋಡ್ ಅಳವಡಿಸಲಾಗಿರುವ ಪಠ್ಯಪುಸ್ತಕಗಳ ಪರಿಣಾಮಕತೆಯ ಬಗ್ಗೆ ಪೋಷಕರಿಗೆ ತಿಳಿಸಿಕೊಡುವುದು ಅವಶ್ಯಕವಾಗಿದೆ.

8) ಮಕ್ಕಳು Q. R ಕೋಡ್ ಬಳಸುತ್ತಿರುವುದರಿಂದ ಅವರ ಶೈಕ್ಷಣಿಕ ಪ್ರಗತಿಯಾಗಿದೆಯೇ ?
(ಹೌದು/ಇಲ್ಲ)

ಶಾಲೆಯ ವಿಧ	ಅಭಿಪ್ರಾಯಪಟ್ಟ ಪೋಷಕರ ಸಂಖ್ಯೆ	ಹೌದು	ಇಲ್ಲ	ಹೌದು %	ಇಲ್ಲ %
ಪ್ರಾಥಮಿಕ ಶಾಲೆ	12	11	1	92%	8%
ಪ್ರೌಢಶಾಲೆ	12	11	1	92%	8%
ಒಟ್ಟು	24	22	2	92%	8%



ಈ ಮೇಲಿನ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಪ್ರೌಢಶಾಲೆಗಳಲ್ಲಿ ತಲಾ ಶೇ. 92 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಒಟ್ಟಾರೆ ಶೇ. 92 ರಷ್ಟು ಪೋಷಕರು ಹೌದು ಎಂದು ಉತ್ತರಿಸಿದ್ದಾರೆ.

ಈ ಮೇಲಿನ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಸಂಖ್ಯೆಯ ಪೋಷಕರು Q. R ಕೋಡ್ ಅಳವಡಿಸಲಾಗಿರುವ ಪಠ್ಯಪುಸ್ತಕಗಳನ್ನು ಬಳಸುತ್ತಿರುವುದರಿಂದ ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಯಾಗಿದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಕೆಲವು ಪೋಷಕರು Q. R ಕೋಡ್ ಬಳಕೆಯಿಂದ ತಮ್ಮ ಮಕ್ಕಳ ಪ್ರಗತಿಯಾಗಿರುವುದರ ಬಗ್ಗೆ ಗೊಂದಲವಿದೆ. ಮುಖ್ಯಶಿಕ್ಷಕರು ಈ ಬಗ್ಗೆ ಗಮನ ಹರಿಸಿ, ಅಂತಹ ಪೋಷಕರ ಮಕ್ಕಳಿಗೆ Q. R ಕೋಡ್‌ನ ಉಪಯುಕ್ತತೆಯ ಬಗ್ಗೆ ತಿಳಿಸಿ ಅವರ ಶೈಕ್ಷಣಿಕ ಪ್ರಗತಿಗೆ ಮಾರ್ಗದರ್ಶನ ನೀಡುವುದು ಅವಶ್ಯಕವಾಗಿದೆ.

ಮುಖ್ಯಶಿಕ್ಷಕರ ಅಭಿಪ್ರಾಯ ಸಂಗ್ರಹಣೆಯ ಪ್ರಶ್ನಾವಳಿ

ಪ್ರಶ್ನೆ 11 : ಪಠ್ಯಪುಸ್ತಕದಲ್ಲಿ Q. R ಕೋಡ್ ಅಳವಡಿಸಿಕೊಂಡಿರುವುದರಿಂದ ನಿಮಗೆ ಆಗುವ 5 ಪ್ರಯೋಜನಗಳನ್ನು ಪಟ್ಟಿ ಮಾಡಿ.

- ಹೆಚ್ಚಿನ ವಿಷಯಾಧಾರಿತ ಮಾಹಿತಿಯನ್ನು ಸಂಗ್ರಹಿಸಲು ಸಹಕಾರಿಯಾಗಿದೆ.
- ಬಹು ಬೇಗ ಮಾಹಿತಿಯು ಲಭ್ಯವಾಗುತ್ತದೆ.
- ಹೆಚ್ಚು ಉದಾಹರಣೆಗಳ ಲಭ್ಯತೆಯಿದೆ.
- ಸಂಪನ್ಮೂಲಗಳು ಸಂಪೂರ್ಣ ಕಲಿಕೆಗೆ ಪೂರಕವಾಗಿವೆ.
- ಪಠ್ಯಪುಸ್ತಕದ ಕೊರತೆಯನ್ನು ನೀಗಿಸುತ್ತದೆ.
- ಮಕ್ಕಳು ಕುತೂಹಲದಿಂದ ಕಲಿಯಲು ಸಹಕಾರಿಯಾಗಿದೆ.
- ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸುತ್ತದೆ.
- ಶಿಕ್ಷಕರು ಉತ್ತಮವಾಗಿ ಬೋಧಿಸಲು ಸಹಕಾರಿಯಾಗಿದೆ.
- ವಿದ್ಯಾರ್ಥಿಗಳನ್ನು ಸ್ವಯಂ ಕಲಿಕೆಗೆ ಪ್ರೇರೇಪಿಸುತ್ತದೆ.
- ಶಿಕ್ಷಕರು ಮತ್ತು ಮಕ್ಕಳಿಗೆ ಬೋಧನಾ-ಕಲಿಕಾ ಕ್ರಮ ಸರಳ
- ಶಿಕ್ಷಕರು ಮತ್ತು ಮಕ್ಕಳಿಗೆ ಸಮಯ ಉಳಿತಾಯವಾಗುತ್ತದೆ.
- ಮಕ್ಕಳು ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಹಕಾರಿಯಾಗಿದೆ.
- ಕಲಿಕೆಯು ದೀರ್ಘಕಾಲ ಉಳಿಯಲು ಸಹಕಾರಿಯಾಗಿದೆ.
- ಪರಿಣಾಮಕಾರಿ ಕಲಿಕೆ ಉಂಟಾಗುತ್ತದೆ.
- ಪ್ರಶ್ನೋತ್ತರ ಅಭ್ಯಾಸಕ್ಕೆ ಉಪಯೋಗ.
- ಕ್ಲಿಷ್ಟಾಂಶಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು.
- ಸ್ವಕಲಿಕೆ ಮತ್ತು ಸ್ವ-ಮೌಲ್ಯಮಾಪನಕ್ಕೆ ಅನುಕೂಲ.
- ಶಿಕ್ಷಕರಿಗೆ ಹೆಚ್ಚಿನ ಮಾಹಿತಿ ಹಾಗೂ ಹೊಸ ಹೊಸ ತಂತ್ರಜ್ಞಾನದ ಅರಿವಾಗುತ್ತದೆ.
- ಮಕ್ಕಳು ಹೆಚ್ಚಿನ ಮಾಹಿತಿ ತಿಳಿಯಲು ಸಹಕಾರಿ.
- ವಿಷಯವನ್ನು ಉತ್ತಮವಾಗಿ ಗ್ರಹಿಸಲು ಸಹಕಾರಿಯಾಗಿದೆ.

ಮುಖ್ಯಶಿಕ್ಷಕರ ಅಭಿಪ್ರಾಯ ಸಂಗ್ರಹಣೆಯ ಪ್ರಶ್ನಾವಳಿ

ಪ್ರಶ್ನೆ 12 : *ತರಗತಿ ಪ್ರಕ್ರಿಯೆಯಲ್ಲಿ Q. R ಕೋಡ್ ಮೂಲಕ e-ಸಂಪನ್ಮೂಲಗಳನ್ನು ಬಳಸಿಕೊಳ್ಳುವಾಗ ನಿಮಗೆ ಎದುರಾಗುವ ಸಮಸ್ಯೆಗಳನ್ನು ಪಟ್ಟಿ ಮಾಡಿ.*

- ಎಲ್ಲಾ ವಿದ್ಯಾರ್ಥಿಗಳ ಹತ್ತಿರ ಆಂಡ್ರಾಯ್ಡ್ ಫೋನ್ ಇರುವುದಿಲ್ಲ.
- ಕೆಲವು ಸ್ಥಳಗಳಲ್ಲಿ ನೆಟ್‌ವರ್ಕ್ ಸಮಸ್ಯೆ ಹೆಚ್ಚು ಇರುತ್ತದೆ.
- ಆಧುನಿಕ ತಂತ್ರಜ್ಞಾನದ ಸಲಕರಣೆಗಳ ಲಭ್ಯತೆಯ ಕೊರತೆ.
- ತಂತ್ರಜ್ಞಾನ ಬಳಕೆಯ ಜ್ಞಾನದ ಕೊರತೆ.
- ಸ್ಮಾರ್ಟ್ ಫೋನ್ ಇದ್ದರೂ ಸಹ ಇಂಟರ್‌ನೆಟ್ ವ್ಯವಸ್ಥೆ ಇಲ್ಲದಿರುವುದು.
- ಗ್ರಾಮೀಣ ಪ್ರದೇಶದ ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ಅವಶ್ಯಕವಾದ ಉಪಕರಣಗಳನ್ನು ಹೊಂದುವುದು ಕಷ್ಟ.
- e-ಸಂಪನ್ಮೂಲಗಳ ಬಳಕೆಯ ಬಗ್ಗೆ ಶಿಕ್ಷಕರಿಗೆ ಸರಿಯಾದ ತರಬೇತಿ ದೊರೆಯದೆ ಇರುವುದು.
- ಸಾಕಷ್ಟು ಪೋಷಕರು ಹಾಗೂ ಮಕ್ಕಳಿಗೆ Q. R ಕೋಡ್ ಬಳಕೆಯ ಬಗ್ಗೆ ಮಾಹಿತಿಯ ಕೊರತೆ.
- ಶಿಕ್ಷಕರು ಒಂದು ಮೊಬೈಲ್‌ನಿಂದ ಎಲ್ಲಾ ವಿದ್ಯಾರ್ಥಿಗಳಿಗೂ ಸಂಪನ್ಮೂಲಗಳನ್ನು ತೋರಿಸಲು ಸಾಧ್ಯವಾಗದಿರುವುದು.
- ವಿದ್ಯುತ್‌ನ ಅಭಾವ.
- ಶಾಲೆಗಳಲ್ಲಿ ಕಂಪ್ಯೂಟರ್‌ಗಳ ಲಭ್ಯತೆ ಇಲ್ಲದಿರುವುದು.
- ಎಲ್ಲಾ ವಿಷಯಗಳಿಗೆ ಹಾಗೂ ಎಲ್ಲಾ ಅಧ್ಯಾಯಗಳಿಗೆ ಸಾಕಷ್ಟು ಚಟುವಟಿಕೆಗಳು ಇನ್ನೂ ಲಭ್ಯವಿಲ್ಲದಿರುವುದು.

ಶಿಕ್ಷಕರ ಅಭಿಪ್ರಾಯ ಸಂಗ್ರಹಣೆಯ ಪ್ರಶ್ನಾವಳಿ

ಪ್ರಶ್ನೆ 14 : ಪಠ್ಯಪುಸ್ತಕದಲ್ಲಿ Q. R ಕೋಡ್ ಅಳವಡಿಸಿಕೊಂಡಿರುವುದರಿಂದ ನಿಮಗೆ ಆಗುವ 5 ಪ್ರಯೋಜನಗಳನ್ನು ಪಟ್ಟಿ ಮಾಡಿ.

- ಕ್ಲಿಷ್ಟ ಸಮಸ್ಯೆಗಳ ಪರಿಹಾರ.
- ಕಲಿಕೆ ಸುಲಭ ಮತ್ತು ಸರಳ.
- ಬೋಧನೆ ಸುಲಭ ಮತ್ತು ಸರಳ.
- ಸ್ಥಳದಲ್ಲೇ ಪರಿಹಾರ.
- ಮಕ್ಕಳು ಮತ್ತು ಪೋಷಕರಿಗೆ ಹೆಚ್ಚು ಅನುಕೂಲ.
- ಬೋಧನಾ-ಕಲಿಕಾ ಪ್ರಕ್ರಿಯೆ ಪರಣಾಮಕಾರಿಯಾಗಿರುತ್ತದೆ.
- ಉತ್ತಮ ಬೋಧನಾ-ಕಲಿಕಾ ಉಪಕರಣಗಳ ಉಪಯೋಗ ಮಾಡಲಾಗಿದೆ.
- ಆಯಾ ಘಟಕಗಳಿಗೆ ಸಂಬಂಧಿಸಿದ ಉತ್ತಮ ಚಟುವಟಿಕೆಗಳು ಕಲಿಕೆಗೆ ಪೂರಕವಾಗಿವೆ.
- ಮಕ್ಕಳಿಗೆ ಬೇಕಾದ ಪಠ್ಯ ವಿಷಯಗಳು ಉಚಿತವಾಗಿ ದೊರೆಯುತ್ತವೆ.
- ಪ್ರತೀ ಘಟಕದಲ್ಲಿ ನೀಡಿರುವ ಮನೆಗೆಲಸದ ಪ್ರಶ್ನೆಗಳನ್ನು ಸುಲಭವಾಗಿ ಉತ್ತರಿಸಬಹುದು.
- ಮಕ್ಕಳ ಕಲಿಕೆ ಆಸಕ್ತಿದಾಯಕವಾಗಿರುತ್ತದೆ.
- ಪ್ರತೀ ಘಟಕದಲ್ಲಿ ನೀಡಿರುವ ರಸಪ್ರಶ್ನೆಗಳು ಆಸಕ್ತಿದಾಯಕವಾಗಿವೆ.
- ಶಿಕ್ಷಕರ ಹಾಗೂ ವಿದ್ಯಾರ್ಥಿಗಳಿಗೆ ಸಮಯದ ಉಳಿತಾಯವಾಗುತ್ತದೆ.
- ಒಂದು ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.
- ವಿದ್ಯಾರ್ಥಿಗಳಿಗೆ ವಿಷಯದ ಬಗ್ಗೆ ಸ್ವತ: ಪುನರ್ ಮನನವಾಗುತ್ತದೆ.
- ವಿದ್ಯಾರ್ಥಿಗಳಲ್ಲಿ ಏಕಾಗ್ರತೆಯನ್ನು ಹೆಚ್ಚಿಸುತ್ತದೆ.
- ಪ್ರಶ್ನೆಗಳಿಗೆ ಉತ್ತರಿಸಿದ ನಂತರ, ಉತ್ತರವನ್ನು ಪರಿಶೀಲಿಸಬಹುದು.
- ತಂತ್ರಜ್ಞಾನದ ಬಳಕೆಯನ್ನು ಪ್ರೋತ್ಸಾಹಿಸುತ್ತದೆ.
- ಸ್ವ ವೇಗದ ಹಾಗೂ ಸ್ವಕಲಿಕೆಗೆ ಸಹಾಯಕವಾಗಿದೆ.
- ಪರಿಣಾಕಾರಿ ಕಲಿಕೆಯಾಗುತ್ತದೆ.
- ಅಂತ್ಯಂತ ವೇಗವಾಗಿ ಮಾಹಿತಿ ಸಂಗ್ರಹಣೆ ಮಾಡಬಹುದು.
- ನಿಖರವಾದ ಮಾಹಿತಿ ದೊರೆಯುತ್ತದೆ.
- ಕಠಿಣ ಪರಿಕಲ್ಪನೆಗಳನ್ನು ಸೃಜನಾತ್ಮಕವಾಗಿ ಕಲಿಸಲು ಸಹಕಾರಿಯಾಗಿದೆ.
- ಆಸಕ್ತಿದಾಯಕ ಚಟುವಟಿಕೆಗಳಿದ್ದು, ಕಲಿಕೆಯ ದೃಢೀಕರಣವಾಗುತ್ತದೆ.
- ಆಸಕ್ತಿದಾಯಕ ಆಟಗಳು ಕಲಿಕೆಗೆ ಸಹಕಾರಿಯಾಗಿವೆ.
- ಪರಿಕಲ್ಪನೆಗಳನ್ನು ಸುಲಭವಾಗಿ ವಿವರಿಸಲು ಹಾಗೂ ಕಲಿಸಲು ರೇಖಾಚಿತ್ರಗಳು, ಛಾಯಾಚಿತ್ರಗಳು ಸಹಾಯಕವಾಗಿವೆ.
- ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ಆಕರ್ಷಕವಾಗಿದೆ.
- NTSE ಹಾಗೂ NMMS ಪರೀಕ್ಷೆಗಳ ತಯಾರಿಗೆ ಉಪಯುಕ್ತವಾಗಿದೆ.
- ಉತ್ತಮ ವಿಡಿಯೋಗಳ ಮೂಲಕ ಪರಿಕಲ್ಪನೆಗಳನ್ನು ನೀಡಿರುವುದರಿಂದ ವಿದ್ಯಾರ್ಥಿಗಳು ಆಸಕ್ತಿಯಿಂದ ಕಲಿಯಬಹುದು.

ಶಿಕ್ಷಕರ ಅಭಿಪ್ರಾಯ ಸಂಗ್ರಹಣೆಯ ಪ್ರಶ್ನಾವಳಿ

ಪ್ರಶ್ನೆ 15 : ತರಗತಿ ಪ್ರಕ್ರಿಯೆಯಲ್ಲಿ Q. R ಕೋಡ್‌ನ ಮೂಲಕ e-ಸಂಪನ್ಮೂಲಗಳನ್ನು ಬಳಸಿಕೊಳ್ಳುವಾಗ ನಿಮಗೆ ಎದುರಾದ ಸಮಸ್ಯೆಗಳನ್ನು ಪಟ್ಟಿ ಮಾಡಿ.

- *ನೆಟ್‌ವರ್ಕ್ ಸಮಸ್ಯೆ*
- *ಇಂಟರ್‌ನೆಟ್ ಸೌಲಭ್ಯದ ಕೊರತೆ ಇರುವುದು*
- *ಎಲ್ಲರ ಬಳಿಯು ಸ್ಮಾರ್ಟ್‌ಫೋನ್ ಇಲ್ಲದಿರುವುದು*
- *ತಾಂತ್ರಿಕ ದೋಷಗಳು*
- *ಗಣಕಯಂತ್ರ ಲಭ್ಯವಿಲ್ಲದಿರುವುದು*
- *ವಿದ್ಯುತ್ ಸಮಸ್ಯೆ*
- *ಕೆಲವು ಮಕ್ಕಳಿಗೆ ಮೊಬೈಲ್ ಬಳಕೆಯ ಜ್ಞಾನ ಇಲ್ಲದಿರುವುದು*
- *ತರಗತಿ ಕೋಣೆಯಲ್ಲಿ e-ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಬೇಕಾದ ಅಗತ್ಯ ಸೌಲಭ್ಯವಿಲ್ಲದಿರುವುದು*
- *ಎಲ್ಲಾ ಮಕ್ಕಳಿಗೆ ತಂತ್ರಾಂಶ ಬಳಕೆಯ ಜ್ಞಾನ ಇಲ್ಲದಿರುವುದು*
- *ಗ್ರಾಮೀಣ ಪ್ರದೇಶಗಳಲ್ಲಿ ಅತಿ ಹೆಚ್ಚು ನೆಟ್‌ವರ್ಕ್ ಸಮಸ್ಯೆ ಇರುವುದು*
- *Q. R ಬಳಸುವಾಗ ಸಾಕಷ್ಟು ಬಾರಿ ತಾಂತ್ರಿಕ ಸಮಸ್ಯೆಗಳು ಉಂಟಾಗುವುದು*

ವಿದ್ಯಾರ್ಥಿಗಳ ಅಭಿಪ್ರಾಯ ಸಂಗ್ರಹಣೆಯ ಪ್ರಶ್ನಾವಳಿ

ಪ್ರಶ್ನೆ 11 : ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ Q. R ಕೋಡ್ ಬಳಸಿ ಸಂಗ್ರಹಿಸಲಾದ ಇ-ಸಂಪನ್ಮೂಲಗಳಿಂದ ಕಲಿಕೆಗೆ ಸಹಾಯಕವಾದ ಎರಡು ಅಂಶಗಳನ್ನು ಪಟ್ಟಿ ಮಾಡಿ.

- ಕಷ್ಟಕರ ಅಂಶಗಳನ್ನು ಕಲಿಯಲು ಅನುಕೂಲಕರವಾಗಿದೆ.
- ಉತ್ತಮವಾದ ಬಹು ಆಯ್ಕೆ ಪ್ರಶ್ನೆಗಳಿವೆ.
- ಕೆಲವು ಚಿತ್ರಗಳನ್ನು ವೀಕ್ಷಿಸಲು ಅನುಕೂಲಕರವಾಗಿದೆ.
- ನಾವು ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಹಕಾರಿಯಾಗಿದೆ.
- ವಿಡಿಯೋಗಳ ಸಹಾಯದಿಂದ ವಿಷಯಗಳನ್ನು ಸುಲಭವಾಗಿ ಗ್ರಹಿಸಬಹುದಾಗಿದೆ.
- ಉತ್ತಮ ಚಟುವಟಿಕೆಗಳು ಮತ್ತು ವಿಡಿಯೋಗಳು ಉತ್ತಮ ಕಲಿಕೆಗೆ ಪೂರಕವಾಗಿವೆ.
- ಸರಳ ಹಾಗೂ ಸುಲಭದಾಯಕ ಕಲಿಕೆ.
- ತಂತ್ರಜ್ಞಾನ ಆಧಾರಿತ ಕಲಿಕೆ.
- ಪ್ರಯೋಗಗಳನ್ನು ವೀಕ್ಷಿಸಿ ಅರ್ಥೈಸಿಕೊಳ್ಳಬಹುದು.
- ಸ್ವಯಂ ಕಲಿಕೆಗೆ ಸಹಕಾರಿಯಾಗಿದೆ.
- ಹೆಚ್ಚಿನ ವಿಷಯಗಳನ್ನು ತಿಳಿಯಲು ಉತ್ತಮವಾಗಿದೆ.
- ನಮ್ಮ ತರಗತಿಗಳ ಘಟಕಗಳ ಪಾಠ ವೀಕ್ಷಣೆಗೆ ಸಹಕಾರಿಯಾಗಿದೆ.
- ಉತ್ತಮವಾದ ರಸಪ್ರಶ್ನೆಗಳಿವೆ.
- ಪ್ರತಿ ಘಟಕವಾರು ವಿವರಣೆ ಉತ್ತಮವಾಗಿದೆ.
- ಅಂಗೈನಲ್ಲಿಯೇ ಗ್ರಂಥಾಲಯ ದೊರೆಯುತ್ತದೆ.
- ಪ್ರಶ್ನೋತ್ತರ ಅಭ್ಯಾಸಕ್ಕೆ ಉಪಯೋಗ.
- ಕ್ಲಿಷ್ಟಾಂಶಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು.
- ಸ್ವಕಲಿಕೆ ಮತ್ತು ಸ್ವ-ಮೌಲ್ಯಮಾಪನಕ್ಕೆ ಅನುಕೂಲ.
- ಪ್ರತಿ ಪಾಠದ ಅಂತ್ಯದಲ್ಲಿ ಕೊಡುವ ಕಿರು ಪರೀಕ್ಷೆಯಿಂದ ನಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಬಹುದು.
- ವಿಷಯಗಳನ್ನು ಪನರಾವರ್ತನೆ ಮಾಡಿಕೊಳ್ಳಬಹುದು.

ವಿದ್ಯಾರ್ಥಿಗಳ ಅಭಿಪ್ರಾಯ ಸಂಗ್ರಹಣೆಯ ಪ್ರಶ್ನಾವಳಿ

ಪ್ರಶ್ನೆ 12: ನೀವು ದೈನಂದಿನ ಜೀವನದಲ್ಲಿ ಸುಲಭ ಹಾಗೂ ಸರಳ ವ್ಯವಹಾರಕ್ಕಾಗಿ Q. R ಕೋಡ್ ಅನ್ನು ಪ್ರಸ್ತುತ ಬಳಸುತ್ತಿರುವ ಸನ್ನಿವೇಶಗಳನ್ನು ಪಟ್ಟಿ ಮಾಡಿ.

- ಅಂಗಡಿಗಳಲ್ಲಿ ವ್ಯಾಪಾರ ಹಾಗೂ ವ್ಯವಹಾರಕ್ಕಾಗಿ Q. R ಕೋಡ್ ಬಳಸುತ್ತೇವೆ.
- ಫೋನ್ ಪೇ , ಗೂಗಲ್ ಪೇ ಮಾಡಲು Q. R ಕೋಡ್ ಬಳಸುತ್ತಾರೆ.
- ಆಧಾರ್ ಕಾರ್ಡ್ ಮಾಹಿತಿಯಲ್ಲಿಯೂ ಸಹ Q. R ಕೋಡ್ ಅಳವಡಿಸಲಾಗಿದೆ.
- ಎಲ್ಲಾ ವ್ಯಾಪಾರದ ಸ್ಥಳಗಳಲ್ಲಿ Q. R ಕೋಡ್ ಬಳಸಲಾಗುತ್ತದೆ.
- ನಗದು ರಹಿತ ವ್ಯವಹಾರ ಮಾಡಲು Q. R ಕೋಡ್ ಬಳಸುತ್ತಾರೆ.
- ಬ್ಯಾಂಕ್ ವ್ಯವಹಾರಗಳನ್ನು ಮಾಡಲು ಬಳಸಲಾಗುತ್ತದೆ.
- ಹಣ ವರ್ಗಾವಣೆ ಮಾಡಲು ಬಳಸುತ್ತಾರೆ.
- ವಸ್ತುಗಳ ಬೆಲೆಗಳನ್ನು ಸ್ಕ್ಯಾನ್ ಮಾಡಲು ಬಳಸುತ್ತಾರೆ.
- e-ಮಾರುಕಟ್ಟೆ ಮತ್ತು e-ಬ್ಯಾಂಕಿಂಗ್‌ನಲ್ಲಿ ಬಳಸಲಾಗುತ್ತಿದೆ.
- ಪೆಟ್ರೋಲ್ ಬಂಕ್‌ಗಳಲ್ಲಿ ಬಳಸುತ್ತಾರೆ.
- ಟೋಲ್‌ಗಳಲ್ಲಿ Q. R ಕೋಡ್ ಬಳಸಲಾಗುತ್ತದೆ.
- ಪಠ್ಯಪುಸ್ತಕಗಳಲ್ಲಿ Q. R ಕೋಡ್ ಬಳಸಲಾಗಿದೆ.
- ಆಹಾರ ಪೊಟ್ಟಣಗಳ ಮೇಲ್ಭಾಗದಲ್ಲಿ Q. R ಕೋಡ್ ಬಳಸಲಾಗುತ್ತಿದೆ.
- ಆಸ್ಪತ್ರೆಗಳಲ್ಲಿ ಹಣವನ್ನು ಪಾವತಿ ಮಾಡಲು Q. R ಕೋಡ್ ಬಳಸಲಾಗುತ್ತದೆ.
- ವಸ್ತುಗಳನ್ನು ಖರೀದಿಸಲು Q. R ಕೋಡ್ ಬಳಕೆಯಾಗುತ್ತದೆ.

ಅಧ್ಯಾಯ-5

ಅಧ್ಯಯನದ ಸಾರಾಂಶ

ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಸಮಗ್ರ ಅಭಿಪ್ರಾಯ

2020-21 ನೇ ಸಾಲಿನಲ್ಲಿ ಸಮೀಕ್ಷೆಗೆ ಒಳಪಟ್ಟ ಒಟ್ಟು 24 ಶಾಲೆಗಳ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಅಧ್ಯಯನದ ಪ್ರಶ್ನಾವಳಿಗಳಲ್ಲಿ ವ್ಯಕ್ತಪಡಿಸಿದ ಸಮಗ್ರ ಅಭಿಪ್ರಾಯ ಈ ಕೆಳಗಿನಂತಿರುತ್ತವೆ.

- Q R ಕೋಡ್ನ ವಿಸ್ತೃತ ರೂಪ , ಈ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ 92% ರಷ್ಟು ಮುಖ್ಯ ಶಿಕ್ಷಕರು ಸರಿ ಉತ್ತರ ನೀಡಿರುತ್ತಾರೆ, ಇನ್ನೂ 8% ಮುಖ್ಯ ಶಿಕ್ಷಕರು ಸರಿ ಉತ್ತರ ನೀಡಿರುವುದಿಲ್ಲ. ಮುಖ್ಯ ಶಿಕ್ಷಕರು ಈ ಬಗ್ಗೆ ಗಮನಹರಿಸಿ ಕೋಡ್ ನ ವಿಸ್ತೃತ ರೂಪ ಹಾಗೂ ಅದರ ಉಪಯೋಗಗಳನ್ನು ತಿಳಿದುಕೊಳ್ಳಬೇಕಾಗಿದೆ. ಪ್ರೌಢಶಾಲೆಗಳಲ್ಲಿ ಶೇ 100 ರಷ್ಟು ಮುಖ್ಯ ಶಿಕ್ಷಕರು ಸರಿ ಉತ್ತರ ನೀಡಿರುತ್ತಾರೆ.
- Q R ಕೋಡ್ ಅನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನ ನೀಡಿರುವುದರ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಮುಖ್ಯಶಿಕ್ಷಕರು ಹೌದು ಎಂದು ಉತ್ತರಿಸಿದ್ದಾರೆ. ಇದರಿಂದ ಎಲ್ಲಾ ಮುಖ್ಯಶಿಕ್ಷಕರು Q.R ಕೋಡ್ ಅನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಶಿಕ್ಷಕರುಗಳಿಗೆ ಸೂಕ್ತ ಮಾರ್ಗದರ್ಶನ ನೀಡಿದ್ದಾರೆ ಎಂದು ತಿಳಿದುಬರುತ್ತದೆ.
- ಶಿಕ್ಷಕರು ಮೊಬೈಲ್ ಮೂಲಕ Q.R ಕೋಡ್ ಸ್ಕ್ಯಾನ್ ಮಾಡಿ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ತೋರಿಸುತ್ತಿರುವುದನ್ನು ಗಮನಿಸಿದ್ದೀರಾ ?, ಈ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 92 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದು, ಇನ್ನೂ ಶೇ. 8 ರಷ್ಟು ಮುಖ್ಯಶಿಕ್ಷಕರು ಇಲ್ಲ ಎಂದು ಉತ್ತರ ನೀಡಿದ್ದಾರೆ. ಸದರಿ ಮುಖ್ಯಶಿಕ್ಷಕರು ಈ ಬಗ್ಗೆ ಗಮನ ಹರಿಸಿ, ಶಿಕ್ಷಕರು ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಿರುವುದರ ಬಗ್ಗೆ ಮೇಲ್ವಿಚಾರಣೆ ಮಾಡುವುದು ಅತ್ಯವಶ್ಯಕವಾಗಿದೆ. ಪ್ರೌಢ ಶಾಲೆಗಳಲ್ಲಿ ಶೇ. 100 ರಷ್ಟು ಮುಖ್ಯಶಿಕ್ಷಕರು ಈ ವಿಷಯದಲ್ಲಿ ಗಮನ ಹರಿಸುತ್ತಿರುವುದು ಕಂಡು ಬಂದಿದೆ.

- ವಿದ್ಯಾರ್ಥಿಗಳು Q.R ಕೋಡ್ ಬಳಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡುವಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಶೇ. 42 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 58 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದಾರೆ. ಈ ಮೇಲಿನ ದತ್ತಾಂಶಗಳನ್ನು ಗಮನಿಸಿದಾಗ ಅತಿ ಹೆಚ್ಚು ಮುಖ್ಯಶಿಕ್ಷಕರು Q.R ಕೋಡ್ ಅನ್ನು ವಿದ್ಯಾರ್ಥಿಗಳು ಬಳಸುತ್ತಿರುವುದರ ಬಗ್ಗೆ ಮೇಲ್ವಿಚಾರಣೆ ಮಾಡುತ್ತಿಲ್ಲವೆಂದು ತಿಳಿದು ಬರುತ್ತದೆ. ಆದ ಕಾರಣ ಮುಖ್ಯಶಿಕ್ಷಕರು Q.R ಕೋಡ್ ಅನ್ನು ವಿದ್ಯಾರ್ಥಿಗಳು ಬಳಸುತ್ತಿರುವುದನ್ನು ಮೇಲ್ವಿಚಾರಣೆ ಮಾಡುವುದು ಅತಿ ಮುಖ್ಯವಾಗಿರುತ್ತದೆ.
- ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ Q.R ಕೋಡ್ ಬಳಕೆಯಿಂದ ಮಕ್ಕಳ ಕಲಿಕೆಯಲ್ಲಿ ಪ್ರಗತಿಯಾಗಿರುವುದನ್ನು ಖಾತ್ರಿ ಪಡಿಸಿಕೊಂಡಿರುವ ಬಗ್ಗೆ, ಪ್ರಾಥಮಿಕ ಶಾಲೆಗಳಲ್ಲಿ ಶೇ. 42 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 75 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದಾರೆ. ಒಟ್ಟಾರೆ ಶೇ. 58 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರಿಸಿರುವುದು ಕಂಡು ಬಂದಿದೆ. ಈ ಮೇಲಿನ ದತ್ತಾಂಶಗಳ ಪ್ರಕಾರ ಪ್ರೌಢಶಾಲಾ ಮುಖ್ಯಶಿಕ್ಷಕರಿಗಿಂತ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕರು Q.R ಕೋಡ್ ಬಳಕೆಯಿಂದ ವಿದ್ಯಾರ್ಥಿಗಳ ಕಲಿಕೆಯಲ್ಲಿ ಉಂಟಾಗಿರುವ ಪ್ರಗತಿಯನ್ನು ಖಾತ್ರಿಪಡಿಸಿಕೊಂಡಿಲ್ಲ ಎಂದು ತಿಳಿದು ಬರುತ್ತದೆ.
- Q.R ಕೋಡ್ ಬಳಸುವ ನಿಟ್ಟಿನಲ್ಲಿ ತಾಂತ್ರಿಕ ದೋಷಗಳನ್ನು ಗುರುತಿಸಿ ಶಿಕ್ಷಕರೊಂದಿಗೆ ಚರ್ಚೆ ಮಾಡಿರುವ ಬಗ್ಗೆ, ಪ್ರಾಥಮಿಕ ಶಾಲೆಗಳಲ್ಲಿ ಶೇ. 67 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದಾರೆ ಹಾಗೂ ಪ್ರೌಢ ಶಾಲೆಗಳಲ್ಲಿ ಶೇ. 83 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದಾರೆ. ಈ ದತ್ತಾಂಶಗಳ ಪ್ರಕಾರ ಹೆಚ್ಚು ಸಂಖ್ಯೆಯ ಮುಖ್ಯಶಿಕ್ಷಕರು Q.R ಕೋಡ್ ಬಳಸುವ ನಿಟ್ಟಿನಲ್ಲಿ ಉಂಟಾಗುವ ತಾಂತ್ರಿಕ ದೋಷಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿರುವುದಿಲ್ಲ ಎಂಬುದು ಕಂಡುಬರುತ್ತದೆ. ಮುಖ್ಯಶಿಕ್ಷಕರು ತಪ್ಪದೇ ತಾಂತ್ರಿಕ ದೋಷಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ ಸೂಕ್ತ ಮಾರ್ಗದರ್ಶನ ನೀಡಬೇಕಾಗಿದೆ.
- Q.R ಕೋಡ್ ಬಳಕೆಯ ಬಗ್ಗೆ ಮಾಹಿತಿಯನ್ನು ಪೋಷಕರ ಗಮನಕ್ಕೆ ತಂದಿರುವ ಬಗ್ಗೆ, ಪ್ರಾಥಮಿಕ ಶಾಲೆಗಳಲ್ಲಿ ಶೇ. 92 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದಾರೆ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 75 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದಾರೆ. ಈ ದತ್ತಾಂಶಗಳ ಪ್ರಕಾರ ಪ್ರಾಥಮಿಕ ಶಾಲೆಗಳ ಮುಖ್ಯಶಿಕ್ಷಕರು ಪ್ರೌಢಶಾಲಾ ಮುಖ್ಯಶಿಕ್ಷಕರಿಗಿಂತ ಹೆಚ್ಚು ಸಂಖ್ಯೆಯಲ್ಲಿ Q.R ಕೋಡ್ ಬಳಕೆಯ ಬಗ್ಗೆ ಮಾಹಿತಿಯನ್ನು ಪೋಷಕರ ಗಮನಕ್ಕೆ ತಂದಿರುತ್ತಾರೆ. ಪ್ರೌಢಶಾಲೆಯ ಮುಖ್ಯಶಿಕ್ಷಕರು

Q.R ಕೋಡ್ ಬಳಕೆಯ ಬಗ್ಗೆ ಮಾಹಿತಿಯನ್ನು ಪೋಷಕರ ಗಮನಕ್ಕೆ ತಂದು ವಿದ್ಯಾರ್ಥಿಗಳ ಕಲಿಕಾ ಪ್ರಗತಿಗೆ ಸಹಕರಿಸಬೇಕಾಗಿದೆ.

- ಶೈಕ್ಷಣಿಕ ಮೆಲ್ವಿಚಾರಣೆ ಮಾಡುವ ಮೂಲಕ e-ಸಂಪನ್ಮೂಲ ಬಳಕೆ ಕುರಿತಂತೆ ಪರಿಶೀಲಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡಿರುವುದರ ಬಗ್ಗೆ, ಪ್ರಾಥಮಿಕ ಶಾಲೆಗಳಲ್ಲಿ ಶೇ. 67 ರಷ್ಟು ಮುಖ್ಯಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 75 ರಷ್ಟು ಮುಖ್ಯಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಸಮೀಕ್ಷೆಗೊಂಡ ಶಾಲೆಗಳ ಮುಖ್ಯಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ ಪ್ರಾಥಮಿಕ ಶಾಲೆಗಳ ಅತಿ ಹೆಚ್ಚಿನ ಮುಖ್ಯಶಿಕ್ಷಕರು e-ಸಂಪನ್ಮೂಲಗಳ ಬಳಕೆಯ ಕುರಿತಂತೆ ಪರಿಶೀಲಿಸಿ ಶಿಕ್ಷಕರಿಗೆ ಮಾರ್ಗದರ್ಶನ ಮಾಡದೇ ಇರುವುದು ತಿಳಿದು ಬಂದಿದೆ. ಪ್ರತೀ ಶಾಲೆಯ ಮುಖ್ಯಶಿಕ್ಷಕರು ಶೈಕ್ಷಣಿಕ ಮೇಲ್ವಿಚಾರಣೆ ನಡೆಸಿ e-ಸಂಪನ್ಮೂಲಗಳ ಬಳಕೆಯ ಬಗ್ಗೆ ಪರಶೀಲಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡಬೇಕಾಗಿದೆ.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರ ಸಮಗ್ರ ಅಭಿಪ್ರಾಯ

2020-21 ನೇ ಸಾಲಿನಲ್ಲಿ ಸಮೀಕ್ಷೆಗೆ ಒಳಪಟ್ಟ ಒಟ್ಟು 24 ಶಾಲೆಗಳ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು ಅಧ್ಯಯನದ ಪ್ರಶ್ನಾವಳಿಗಳಲ್ಲಿ ವ್ಯಕ್ತಪಡಿಸಿದ ಸಮಗ್ರ ಅಭಿಪ್ರಾಯ ಈ ಕೆಳಗಿನಂತಿರುತ್ತವೆ.

- Q. R ಕೋಡ್ ಅನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಎಂಬ ಪ್ರಶ್ನೆ ಕೇಳಲಾಗಿ, ಪ್ರಾಥಮಿಕ ಶಾಲೆಗಳಲ್ಲಿ ಶೇ. 100 ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಎಲ್ಲಾ ಶಿಕ್ಷಕರಿಗೂ ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q.R ಕೋಡ್‌ನ ಬಗ್ಗೆ ತಿಳಿದಿದೆ ಎಂದು ಸ್ಪಷ್ಟವಾಗುತ್ತದೆ.
- Q.R ಕೋಡ್‌ನ ವಿಸ್ತೃತ ರೂಪದ ಬಗ್ಗೆ, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಸರಿಯಾದ ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಎಲ್ಲಾ ಶಿಕ್ಷಕರಿಗೂ Q.R ಕೋಡ್‌ನ ವಿಸ್ತೃತ ರೂಪದ ಬಗ್ಗೆ ತಿಳಿದಿದೆ ಎಂದು ಸ್ಪಷ್ಟವಾಗುತ್ತದೆ.
- ಯಾವ ಆಪ್ ಅನ್ನು ಬಳಸಿ ಸ್ಮಾರ್ಟ್ ಫೋನ್ ಮೂಲಕ Q.R ಕೋಡ್‌ನಲ್ಲಿರುವ e-ಸಂಪನ್ಮೂಲಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ?, ಈ ಪ್ರಶ್ನೆಗೆ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಸರಿಯಾದ ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಎಲ್ಲಾ ಶಿಕ್ಷಕರು ದೀಕ್ಷಾ ಆಪ್ ಅನ್ನು ಬಳಸಿ e-ಸಂಪನ್ಮೂಲಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂಬುದರ ಬಗ್ಗೆ ಅರಿವಿದೆ ಎಂದು ತಿಳಿದು ಬರುತ್ತದೆ.
- Q.R ಕೋಡ್‌ನ ಬಳಕೆಯ ಬಗ್ಗೆ ಮಾಹಿತಿಯನ್ನು ಮಕ್ಕಳಿಗೆ ಮತ್ತು ಪೋಷಕರಿಗೆ ನೀಡಲಾಗಿದೆಯೇ ? ಎಂಬ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 96 ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದಾರೆ. ಈ ದತ್ತಾಂಶಗಳ ಪ್ರಕಾರ ಪ್ರಾಥಮಿಕ ಶಾಲೆಗಳ ಕೆಲವು ಶಿಕ್ಷಕರು Q.R ಕೋಡ್‌ನ ಬಳಕೆಯ ಬಗ್ಗೆ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ನೀಡಿರುವುದಿಲ್ಲವೆಂದು ತಿಳಿದು ಬರುತ್ತದೆ.

- ಮೊಬೈಲ್ ಮೂಲಕ Q.R ಕೋಡ್ ಸ್ಕ್ಯಾನ್ ಮಾಡಿ e-ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿರುವುದರ ಬಗ್ಗೆ, ಪ್ರಾಥಮಿಕ ಶಾಲೆಗಳಲ್ಲಿ ಶೇ. 63 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 92 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಪ್ರಾಥಮಿಕ ಶಾಲೆಗಳಲ್ಲಿ ಅತಿ ಹೆಚ್ಚು ಶಿಕ್ಷಕರು ಮೊಬೈಲ್ ಮೂಲಕ Q.R ಕೋಡ್ ಸ್ಕ್ಯಾನ್ ಮಾಡಿ e-ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿರುವುದಿಲ್ಲ ಎಂದು ತಿಳಿದು ಬಂದಿದೆ. ಪ್ರೌಢಶಾಲೆಗಳಲ್ಲಿಯೂ ಸಹ ಕೆಲವು ಶಿಕ್ಷಕರು ಈ ಬಗ್ಗೆ ಗಮನ ಹರಿಸಿ e-ಸಂಪನ್ಮೂಗಳನ್ನು ಹೇಗೆ ಸಂಗ್ರಹಿಸಬೇಕು ಎಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕಾಗಿದೆ.
- ಪ್ರಸ್ತುತ ದೈನಂದಿನ ವ್ಯವಹಾರಿಕ ಜೀವನದಲ್ಲಿ Q.R ಕೋಡ್ ಬಳಸುತ್ತಿರುವುದರ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮಾರ್ಗದರ್ಶನ ನೀಡಿರುವ ಬಗ್ಗೆ ಪ್ರಶ್ನಿಸಲಾಗಿ, ಪ್ರಾಥಮಿಕ ಶಾಲೆಗಳಲ್ಲಿ ಶೇ. 38 ರಷ್ಟು ಶಿಕ್ಷಕರು ಹಾಗೂ ಪೌಢಶಾಲೆಗಳಲ್ಲಿ ಶೇ. 88 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಶಿಕ್ಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ ಅತಿ ಹೆಚ್ಚಿನ ಸಂಖ್ಯೆಯ ಶಿಕ್ಷಕರು ದೈನಂದಿನ ವ್ಯವಹಾರಿಕ ಜೀವನದಲ್ಲಿ Q.R ಕೋಡ್ ಅನ್ನು ಬಳಸುತ್ತಿರುವುದರ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮಾರ್ಗದರ್ಶನ ನೀಡದಿರುವುದು ಸ್ಪಷ್ಟವಾಗಿದೆ. ಆದ ಕಾರಣ ಶಿಕ್ಷಕರು ಈ ಬಗ್ಗೆ ಮಾರ್ಗದರ್ಶನ ನೀಡುವ ಅಗತ್ಯವಿದೆ.
- ವಿದ್ಯಾರ್ಥಿಗಳು Q.R ಕೋಡ್ ಬಳಸುತ್ತಿರುವುದರ ಬಗ್ಗೆ ಮೇಲ್ವಿಚಾರಣೆ ಮಾಡಿರುವಿರಾ ? ಎಂಬ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 33 ರಷ್ಟು ಶಿಕ್ಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 88 ರಷ್ಟು ಶಿಕ್ಷಕರು ಹೌದು ಎಂದು ಉತ್ತರ ನೀಡಿದ್ದಾರೆ. ಈ ದತ್ತಾಂಶಗಳ ಪ್ರಕಾರ ಪ್ರಾಥಮಿಕ ಶಾಲೆಯ ಅತಿ ಹೆಚ್ಚಿನ ಸಂಖ್ಯೆಯ ಶಿಕ್ಷಕರು ಮೇಲ್ವಿಚಾರಣೆ ಮಾಡಿರುವುದಿಲ್ಲ ಎಂದು ಕಂಡು ಬಂದಿದೆ. ಆದ ಕಾರಣ ಶಿಕ್ಷಕರು Q.R ಕೋಡ್ ಅನ್ನು ವಿದ್ಯಾರ್ಥಿಗಳು ಬಳಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡಬೇಕಾಗಿದೆ.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಮಗ್ರ ಅಭಿಪ್ರಾಯ

2020-21 ನೇ ಸಾಲಿನಲ್ಲಿ ಸಮೀಕ್ಷೆಗೆ ಒಳಪಟ್ಟ ಒಟ್ಟು 24 ಶಾಲೆಗಳ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳು ಅಧ್ಯಯನದ ಪ್ರಶ್ನಾವಳಿಗಳಲ್ಲಿ ವ್ಯಕ್ತಪಡಿಸಿದ ಸಮಗ್ರ ಅಭಿಪ್ರಾಯ ಈ ಕೆಳಗಿನಂತಿರುತ್ತವೆ.

- Q.R ಕೋಡ್ ಬಗ್ಗೆ ತಿಳಿದಿದೆಯೇ ? ಎಂಬ ಪ್ರಶ್ನೆಗೆ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರಿಸಿದ್ದಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗಂಡ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳಿಗೂ Q.R ಕೋಡ್‌ನ ಬಗ್ಗೆ ತಿಳಿದಿದೆ ಎಂದು ಅರ್ಥವಾಗುತ್ತದೆ.
- Q.R ಕೋಡ್‌ನ ವಿಸ್ತೃತ ರೂಪ, ಈ ಪ್ರಶ್ನೆಗೆ ಪ್ರಾಥಮಿಕ ಶಾಲೆಗಳಲ್ಲಿ ಶೇ. 83 ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 92 ರಷ್ಟು ವಿದ್ಯಾರ್ಥಿಗಳು ಸರಿ ಉತ್ತರ ನೀಡಿದ್ದಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ ಇನ್ನೂ ಸಾಕಷ್ಟು ವಿದ್ಯಾರ್ಥಿಗಳಿಗೆ Q.R ಕೋಡ್‌ನ ವಿಸ್ತೃತ ರೂಪ ಹಾಗೂ ಅದರ ಅರ್ಥ ತಿಳಿದಿರುವುದಿಲ್ಲ. ಮುಖ್ಯಶಿಕ್ಷಕರು ಹಾಗೂ ಸಹ ಶಿಕ್ಷಕರು ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿ ವಿದ್ಯಾರ್ಥಿಗಳಿಗೆ Q.R ಕೋಡ್‌ನ ಅರ್ಥವನ್ನು ತಿಳಿಸಬೇಕಾಗಿದೆ.
- Q.R ಕೋಡ್ ಅನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?, ಈ ಪ್ರಶ್ನೆ ಕೇಳಲಾಗಿ ಪ್ರಾಥಮಿಕ ಶಾಲೆಗಳಲ್ಲಿ ಶೇ. 98 ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಪ್ರಾಥಮಿಕ ಶಾಲೆಗಳ ಕೆಲವು ವಿದ್ಯಾರ್ಥಿಗಳಿಗೆ Q.R ಕೋಡ್ ಅನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ ಬಗ್ಗೆ ಅರಿವು ಇರುವುದಿಲ್ಲ. ಶಿಕ್ಷಕರು ಇದರ ಬಗ್ಗೆ ಹೆಚ್ಚಿನ ಗಮನ ನೀಡಿ ವಿದ್ಯಾರ್ಥಿಗಳಿಗೆ Q.R ಕೋಡ್ ಅನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ ಬಗ್ಗೆ ಮನದಟ್ಟು ಮಾಡಿಕೊಡಬೇಕಾಗಿದೆ.
- ತರಗತಿ ಪ್ರಕ್ರಿಯೆಯಲ್ಲಿ ಶಿಕ್ಷಕರು Q.R ಕೋಡ್ ಬಳಸಿ e-ಸಂಪನ್ಮೂಲಗಳನ್ನು ಪರಿಚಯಿಸಿದ್ದಾರೆಯೇ ? ಈ ಪ್ರಶ್ನೆ ಕೇಳಲಾಗಿ ಪ್ರಾಥಮಿಕ ಶಾಲೆಗಳಲ್ಲಿ ಶೇ. 88 ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 94 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ ಇನ್ನೂ ಕೆಲವು ವಿದ್ಯಾರ್ಥಿಗಳಿಗೆ Q.R ಕೋಡ್ ಬಳಸಿ e-ಸಂಪನ್ಮೂಲಗಳನ್ನು ಸಂಗ್ರಹಿಸುವುದರ ಬಗ್ಗೆ ಶಿಕ್ಷಕರು ಪರಿಚಯಿಸದೇ

ಇರುವುದು ಕಂಡುಬರುತ್ತದೆ. ಆದ ಕಾರಣ ಶಿಕ್ಷಕರು ಮುತುವರ್ಜಿ ವಹಿಸಿ ಎಲ್ಲಾ ವಿದ್ಯಾರ್ಥಿಗಳಿಗೂ Q.R ಕೋಡ್ ಬಳಸಿ e-ಸಂಪನ್ಮೂಲಗಳನ್ನು ಪರಿಚಯಿಸುವ ಅವಶ್ಯಕತೆ ಇದೆ.

- ಶಾಲೆಯಲ್ಲಿ Q.R ಕೋಡ್‌ನಲ್ಲಿರುವ e-ಸಂಪನ್ಮೂಲಗಳನ್ನು ಸಂಗ್ರಹಿಸಿಕೊಳ್ಳಲು ಸೌಲಭ್ಯಗಳ ಲಭ್ಯತೆ ಇದೆಯೇ ? ಈ ಪ್ರಶ್ನೆ ಕೇಳಲಾಗಿ, ಪ್ರಾಥಮಿಕ ಶಾಲೆಗಳಲ್ಲಿ ಶೇ. 48 ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 67 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚು ಶಾಲೆಗಳಲ್ಲಿ e-ಸಂಪನ್ಮೂಲಗಳನ್ನು ಸಂಗ್ರಹಿಸಲು ಪೂರಕವಾದ ಸೌಲಭ್ಯಗಳು ಇರುವುದಿಲ್ಲ ಎಂದು ತಿಳಿದು ಬರುತ್ತದೆ. ಶಿಕ್ಷಕರು ಈ ಬಗ್ಗೆ ಗಮನ ನೀಡಿ e-ಸಂಪನ್ಮೂಲಗಳನ್ನು ಸಂಗ್ರಹಿಸಲು ಪೂರಕವಾದ ಸೌಲಭ್ಯಗಳು ಶಾಲೆಯಲ್ಲಿ ಲಭ್ಯವಿರುವಂತೆ ನೋಡಿಕೊಳ್ಳಲು ಪ್ರಯತ್ನಿಸುವ ಅವಶ್ಯಕತೆಯಿದೆ.
- Q.R ಕೋಡ್ ಬಳಸುತ್ತಿರುವುದರ ಬಗ್ಗೆ ಮುಖ್ಯಶಿಕ್ಷಕರು ಮೇಲ್ವಿಚಾರಣೆ ಮಾಡುತ್ತಿದ್ದಾರೆಯೇ ? ಈ ಪ್ರಶ್ನೆ ಕೇಳಲಾಗಿ, ಪ್ರಾಥಮಿಕ ಶಾಲೆಗಳಲ್ಲಿ ಶೇ. 48 ರಷ್ಟು ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 90 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಗಳಲ್ಲಿ ಶೇ. 50 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು Q.R ಕೋಡ್ ಬಳಸುತ್ತಿರುವ ಬಗ್ಗೆ ಮುಖ್ಯಶಿಕ್ಷಕರು ಮೇಲ್ವಿಚಾರಣೆ ಮಾಡುತ್ತಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಮುಖ್ಯಶಿಕ್ಷಕರ ಮೇಲ್ವಿಚಾರಣೆ ಅತ್ಯಗತ್ಯವಾಗಿದೆ. ಪ್ರೌಢಶಾಲೆಗಳಲ್ಲಿಯೂ ಸಹ ಮುಖ್ಯಶಿಕ್ಷಕರು ಮೇಲ್ವಿಚಾರಣೆ ಮಾಡಬೇಕಾಗಿದೆ.
- ತರಗತಿ ಹಾಗೂ ವಿಷಯಗಳನ್ನು Q.R ಕೋಡ್ ಬಳಸಿ ದೀಕ್ಷಾ ಆಪ್‌ನಲ್ಲಿ ಸುಲಭವಾಗಿ ಹುಡುಕಲು ಪ್ರಯತ್ನಿಸಿರುವ ಬಗ್ಗೆ, ಪ್ರಾಥಮಿಕ ಶಾಲೆಗಳಲ್ಲಿ ಶೇ. 69 ರಷ್ಟು ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 94 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಪ್ರಾಥಮಿಕ ಶಾಲೆಗಳಲ್ಲಿ ಸಾಕಷ್ಟು ವಿದ್ಯಾರ್ಥಿಗಳಿಗೆ ದೀಕ್ಷಾ ಆಪ್‌ನಲ್ಲಿ ವಿಷಯಾಧಾರಿತ e-ಸಂಪನ್ಮೂಲಗಳನ್ನು ಸುಲಭವಾಗಿ ಹುಡುಕಲು ಸಾಧ್ಯವಾಗುತ್ತಿಲ್ಲ ಎಂಬುದು ತಿಳಿದು ಬರುತ್ತದೆ. ಮುಖ್ಯಶಿಕ್ಷಕರು ಹಾಗೂ ಸಹ ಶಿಕ್ಷಕರು Q.R ಕೋಡ್‌ನ ಸಹಾಯದಿಂದ ದೀಕ್ಷಾ ಆಪ್

ನಲ್ಲಿ ವಿಷಯಾಧಾರಿತ e-ಸಂಪನ್ಮೂಲಗಳನ್ನು ಸುಲಭವಾಗಿ ಹುಡುಕುವುದು ಹೇಗೆ ಎಂದು ತಿಳಿಸಿಕೊಡಬೇಕಾಗಿದೆ.

- Q.R ಬಳಸುವಾಗ ತಾಂತ್ರಿಕ ತೊಂದರೆಗಳು ನಿಮಗೆ ಎದುರಾಗಿವೆಯೇ ? ಈ ಪ್ರಶ್ನೆಗೆ, ಪ್ರಾಥಮಿಕ ಶಾಲೆಗಳಲ್ಲಿ ಶೆ. 73 ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 60 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, Q. R ಕೋಡ್ ಬಳಸುವಾಗ ಸಾಕಷ್ಟು ತಾಂತ್ರಿಕ ತೊಂದರೆಗಳು ಉಂಟಾಗುತ್ತಿವೆ ಎಂದು ಹೆಚ್ಚಿನ ವಿದ್ಯಾರ್ಥಿಗಳು ತಿಳಿಸಿರುವುದು ಕಂಡುಬಂದಿದೆ. ಮುಖ್ಯಶಿಕ್ಷಕರು ಈ ಬಗ್ಗೆ ಪರಿಶೀಲಿಸಿ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಿಕೊಳ್ಳಲು ಮಾರ್ಗದರ್ಶನ ನೀಡುವ ಅಗತ್ಯವಿದೆ.
- ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ Q.R ಕೋಡ್ ಬಳಸಿ ಸಂಗ್ರಹಿಸಲಾದ e-ಸಂಪನ್ಮೂಲಗಳಿಂದ ಕಲಿಕೆಗೆ ಸಹಾಯಕವಾದ ಅಂಶಗಳನ್ನು ಪಟ್ಟಿ ಮಾಡಿ ಎಂಬ ಪ್ರಶ್ನೆಗೆ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ವಿದ್ಯಾರ್ಥಿಗಳು ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ Q.R ಕೋಡ್ ಅನ್ನು ಬಳಸುತ್ತಿದ್ದಾರೆ ಎಂಬ ತೀರ್ಮಾನಕ್ಕೆ ಬರಬಹುದು. ಎಲ್ಲಾ ವಿದ್ಯಾರ್ಥಿಗಳು Q.R ಕೋಡ್ ಅನ್ನು ಬಳಸುವಂತಾಗಬೇಕು, ಆಗ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಉತ್ತಮವಾಗಿ ಹೊರ ಹೊಮ್ಮಲಿಕ್ಕೆ ಸಾಧ್ಯವಾಗುತ್ತದೆ.
- ದೈನಂದಿನ ಜೀವನದಲ್ಲಿ ಸುಲಭ ಹಾಗೂ ಸರಳ ವ್ಯವಹಾರಕ್ಕಾಗಿ Q.R ಕೋಡ್ ಅನ್ನು ಪ್ರಸ್ತುತ ಬಳಸುತ್ತಿರುವ ಸನ್ನಿವೇಶಗಳನ್ನು ಪಟ್ಟಿ ಮಾಡಿ, ಈ ಪ್ರಶ್ನೆಗೆ ವಿದ್ಯಾರ್ಥಿಗಳು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಕೇವಲ ಪಠ್ಯಪುಸ್ತಕದಲ್ಲಿ ಮಾತ್ರವಲ್ಲದೆ ವಿವಿಧ ಕ್ಷೇತ್ರಗಳಲ್ಲಿಯೂ Q.R ಕೋಡ್‌ನ ಬಳಕೆಯಾಗುತ್ತಿದೆ ಎಂಬ ಅರಿವು ವಿದ್ಯಾರ್ಥಿಗಳಲ್ಲಿಯೂ ಇದೆ ಎಂಬುದು ತಿಳಿದು ಬರುತ್ತದೆ. ಇದರಿಂದ ವಿದ್ಯಾರ್ಥಿಗಳಲ್ಲಿ Q.R ಕೋಡ್‌ನ ಅರಿವು ಇದೆ, ಆದರೆ ಎಲ್ಲಾ ವಿದ್ಯಾರ್ಥಿಗಳೂ ಹೆಚ್ಚಾಗಿ ಬಳಸುವಂತಾಗಬೇಕಿದೆ.

ಪೋಷಕರ ಸಮಗ್ರ ಅಭಿಪ್ರಾಯ

2020-21 ನೇ ಸಾಲಿನಲ್ಲಿ ಸಮೀಕ್ಷೆಗೆ ಒಳಪಟ್ಟ ಒಟ್ಟು 24 ಶಾಲೆಗಳ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪೋಷಕರು, ಅಧ್ಯಯನದ ಪ್ರಶ್ನಾವಳಿಗಳಲ್ಲಿ ವ್ಯಕ್ತಪಡಿಸಿದ ಸಮಗ್ರ ಅಭಿಪ್ರಾಯ ಈ ಕೆಳಗಿನಂತಿರುತ್ತವೆ.

- ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ Q.R ಕೋಡ್ ಬಗ್ಗೆ ಮಾಹಿತಿ ಇದೆಯೇ ? ಈ ಪ್ರಶ್ನೆಗೆ, ಪ್ರಾಥಮಿಕ ಶಾಲೆಗಳಲ್ಲಿ ಶೇ. 75 ರಷ್ಟು ಪೋಷಕರು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 100 ರಷ್ಟು ಪೋಷಕರು ಹೌದು ಎಂದು ಉತ್ತರಿಸಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ ಪ್ರಾಥಮಿಕ ಶಾಲೆಯ ಶೇ. 25 ರಷ್ಟು ಪೋಷಕರಿಗೆ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ Q.R ಕೋಡ್‌ನ ಬಗ್ಗೆ ತಿಳಿದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದ ಕಾರಣ ಮುಖ್ಯಶಿಕ್ಷಕರು ಈ ಬಗ್ಗೆ ಗಮನ ಹರಿಸಿ ಪೋಷಕರಿಗೆ Q.R ಕೋಡ್‌ನ ಬಗ್ಗೆ ತಿಳಿಸಿಕೊಡುವ ಅಗತ್ಯತೆ ಇದೆ.
- ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ Q.R ಕೋಡ್ ಅನ್ನು ನಿಮ್ಮ ಮಕ್ಕಳು ಬಳಸುತ್ತಿರುವುದನ್ನು ಗಮನಿಸಿದ್ದೀರಾ ? ಈ ಪ್ರಶ್ನೆಗೆ, ಪ್ರಾಥಮಿಕ ಶಾಲೆಗಳಲ್ಲಿ ಶೇ. 33 ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 75 ರಷ್ಟು ಪೋಷಕರು ಹೌದು ಎಂದು ಉತ್ತರಿಸಿದ್ದಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಪೋಷಕರು ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q.R ಕೋಡ್ ಅನ್ನು ತಮ್ಮ ಮಕ್ಕಳು ಬಳಸುತ್ತಿರುವುದನ್ನು ಗಮನಿಸಿರುವುದಿಲ್ಲ ಎಂದು ಉತ್ತರಿಸಿದ್ದಾರೆ. ಆದ ಕಾರಣ ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ಎಲ್ಲಾ ಪೋಷಕರಿಗೆ ತಮ್ಮ ಮಕ್ಕಳು ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ Q.R ಕೋಡ್ ಅನ್ನು ಬಳಸುತ್ತಿರುವ ಬಗ್ಗೆ ಗಮನಿಸುವಂತೆ ಮಾರ್ಗದರ್ಶನ ನೀಡಬೇಕಾಗಿದೆ.
- ಪೋಷಕರ ಸಭೆಯಲ್ಲಿ ಮುಖ್ಯಶಿಕ್ಷಕರು/ಶಿಕ್ಷಕರು Q.R ಕೋಡ್ ಬಳಕೆಯ ಬಗ್ಗೆ ನಿಮ್ಮೊಂದಿಗೆ ಚರ್ಚಿಸಿದ್ದಾರೆಯೇ ? ಈ ಪ್ರಶ್ನೆಗೆ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶೇ. 83 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಇನ್ನೂ ಶೇ. 17 ರಷ್ಟು ಶಾಲೆಗಳ ಮುಖ್ಯಶಿಕ್ಷಕರು ಪೋಷಕರ ಸಭೆಯಲ್ಲಿ Q.R ಕೋಡ್‌ನ ಬಳಕೆಯ ಬಗ್ಗೆ ಪೋಷಕರೊಂದಿಗೆ ಚರ್ಚಿಸಿಲ್ಲವೆಂಬುದು ಸ್ಪಷ್ಟವಾಗಿದೆ.

ಆದ್ದರಿಂದ ಮುಖ್ಯಶಿಕ್ಷಕರು ಈ ಬಗ್ಗೆ ಪೋಷಕರ ಸಭೆಯಲ್ಲಿ ಚರ್ಚಿಸಿ ಮಾರ್ಗದರ್ಶನ ನೀಡುವ ಅವಶ್ಯಕತೆ ಇದೆ.

- Q.R ಕೋಡ್ ಬಳಕೆಯ ತಂತ್ರಜ್ಞಾನದಿಂದ ದೈನಂದಿನ ವ್ಯವಹಾರವನ್ನು ಸರಳವಾಗಿ ನಡೆಸಬಹುದು ಎಂಬುದನ್ನು ನೀವು ಒಪ್ಪುವಿರಾ ? ಈ ಪ್ರಶ್ನೆಗೆ, ಪ್ರಾಥಮಿಕ ಶಾಲೆಗಳಲ್ಲಿ ಶೇ. 25 ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇ. 58 ರಷ್ಟು ಪೋಷಕರು ಹೌದು ಎಂದು ಉತ್ತರ ನೀಡಿರುತ್ತಾರೆ. ಈ ದತ್ತಾಂಶಗಳ ಪ್ರಕಾರ ಸಮೀಕ್ಷೆ ಕೈಗೊಂಡ ಶಾಲೆಗಳ ಪೋಷಕರು ನೀಡಿರುವ ಉತ್ತರಗಳನ್ನು ಗಮನಿಸಿದಾಗ, ಅತಿ ಹೆಚ್ಚಿನ ಸಂಖ್ಯೆಯ ಪೋಷಕರು Q.R ಕೋಡ್‌ನ ಬಳಕೆಯ ತಂತ್ರಜ್ಞಾನದಿಂದ ದೈನಂದಿನ ವ್ಯವಹಾರವನ್ನು ಸರಳವಾಗಿ ನಡೆಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣ Q.R ಕೋಡ್‌ನ ಬಳಕೆಯ ಬಗ್ಗೆ ಪೋಷಕರಿಗೆ ಅರಿವು ಇಲ್ಲದಿರುವುದು. ಈ ಬಗ್ಗೆ ಮುಖ್ಯಶಿಕ್ಷಕರು ಗಮನ ಹರಿಸಿ ದೈನಂದಿನ ವ್ಯವಹಾರದಲ್ಲಿ Q.R ಕೋಡ್‌ನ ಸರಳತೆಯ ಬಗ್ಗೆ ಪೋಷಕರಿಗೆ ಅರಿವು ಮೂಡಿಸಬೇಕಾಗಿದೆ.

ಅಧ್ಯಯನದ ಫಲಶೃತಿ

2020-21 ನೇ ಸಾಲಿನ ಶಿಕ್ಷಕ ಶಿಕ್ಷಣ ಯೋಜನೆಯಡಿಯಲ್ಲಿ DSERT ವತಿಯಿಂದ ಅನುಮೋದಿತ ತುಮಕೂರು (ದ) ಜಿಲ್ಲೆಯ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q.R ಕೋಡ್ ಅನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಬಳಸುತ್ತಿರುವ ವಿಷಯದ ಕುರಿತು ಶೈಕ್ಷಣಿಕ ಅಧ್ಯಯನ ಎಂಬ ಶೀರ್ಷಿಕೆಯಡಿ ಅಧ್ಯಯನ ಕೈಗೊಳ್ಳಲಾಗಿದ್ದು, ಈ ಅಧ್ಯಯನದಿಂದ ಕಂಡುಬಂದ ಫಲಶೃತಿಯ ಅಂಶಗಳು ಈ ಕೆಳಗಿನಂತಿರುತ್ತವೆ.

- ಎಲ್ಲಾ ಮುಖ್ಯಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ Q.R ಕೋಡ್ ಅನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ ಮಾಹಿತಿ ಇದೆ.
- ಪ್ರಾಥಮಿಕ ಶಾಲೆಗಳಲ್ಲಿ ಶೇ. 58 ಮತ್ತು ಪ್ರೌಢಶಾಲೆಗಳಲ್ಲಿ ಶೇ. 42, ಒಟ್ಟಾರೆ ಶೇ. 50 ರಷ್ಟು ಮುಖ್ಯಶಿಕ್ಷಕರು e-ಸಂಪನ್ಮೂಲಗಳನ್ನು Q.R ಕೋಡ್ ಉಪಯೋಗಿಸಿಕೊಂಡು ವಿದ್ಯಾರ್ಥಿಗಳು ಬಳಸುತ್ತಿರುವುದರ ಬಗ್ಗೆ ಮೇಲ್ವಿಚಾರಣೆ ಮಾಡಿರುವುದಿಲ್ಲ.
- ಪ್ರಾಥಮಿಕ ಶಾಲೆಗಳಲ್ಲಿ ಶೇ. 58 ರಷ್ಟು ಮತ್ತು ಪ್ರೌಢಶಾಲೆಗಳಲ್ಲಿ ಶೇ. 25 ರಷ್ಟು, ಒಟ್ಟಾರೆ ಶೇ. 42 ರಷ್ಟು ಮುಖ್ಯಶಿಕ್ಷಕರು ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿರುವ Q.R ಕೋಡ್ ಬಳಕೆಯಿಂದ ಮಕ್ಕಳ ಕಲಿಕೆಯಲ್ಲಿ ಪ್ರಗತಿಯಾಗಿರುವುದನ್ನು ಖಾತ್ರಿಪಡಿಸಿಕೊಂಡಿರುವುದಿಲ್ಲ.
- ಪ್ರಾಥಮಿಕ ಶಾಲೆಗಳಲ್ಲಿ ಶೇ. 33 ರಷ್ಟು ಮತ್ತು ಪ್ರೌಢಶಾಲೆಗಳಲ್ಲಿ ಶೇ.17 ರಷ್ಟು , ಒಟ್ಟಾರೆ ಶೇ. 25 ರಷ್ಟು ಮುಖ್ಯ ಶಿಕ್ಷಕರು Q.R ಕೋಡ್ ಬಳಸುವ ನಿಟ್ಟಿನಲ್ಲಿ ತಾಂತ್ರಿಕ ದೋಷಗಳನ್ನು ಗುರ್ತಿಸಿ ಶಿಕ್ಷಕರೊಂದಿಗೆ ಚರ್ಚೆ ಮಾಡಿರುವುದಿಲ್ಲ.
- ಪ್ರಾಥಮಿಕ ಶಾಲೆಗಳಲ್ಲಿ ಶೇ. 33 ರಷ್ಟು ಮತ್ತು ಪ್ರೌಢಶಾಲೆಗಳಲ್ಲಿ ಶೇ. 25 ರಷ್ಟು, ಒಟ್ಟಾರೆ ಶೇ. 29 ರಷ್ಟು ಮುಖ್ಯಶಿಕ್ಷಕರು Q.R ಕೋಡ್ ಬಳಸಿ e-ಸಂಪನ್ಮೂಲ ಬಳಕೆ ಕುರಿತಂತೆ ಪರಿಶೀಲಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡಿರುವುದಿಲ್ಲ ಹಾಗೂ ಮೇಲ್ವಿಚಾರಣೆ ಮಾಡಿರುವುದಿಲ್ಲ.
- ಪ್ರಾಥಮಿಕ ಶಾಲೆಗಳಲ್ಲಿ ಶೇ. 37 ರಷ್ಟು ಮತ್ತು ಪ್ರೌಢಶಾಲೆಗಳಲ್ಲಿ ಶೇ. 8 ರಷ್ಟು, ಒಟ್ಟಾರೆ ಶೇ. 23 ರಷ್ಟು ಶಿಕ್ಷಕರು ಮೊಬೈಲ್ ಮೂಲಕ Q.R ಕೋಡ್ ಸ್ಕ್ಯಾನ್ ಮಾಡಿ e-ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿರುವುದಿಲ್ಲ.

- ಪ್ರಾಥಮಿಕ ಶಾಲೆಗಳಲ್ಲಿ ಶೇ. 62 ರಷ್ಟು ಮತ್ತು ಪ್ರೌಢಶಾಲೆಗಳಲ್ಲಿ ಶೇ. 12 ರಷ್ಟು, ಒಟ್ಟಾರೆ ಶೇ. 37 ರಷ್ಟು ಶಿಕ್ಷಕರು ದೈನಂದಿನ ಜೀವನದಲ್ಲಿ Q.R ಕೋಡ್ ಬಳಸುತ್ತಿರುವುದರ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮಾರ್ಗದರ್ಶನ ನೀಡಿರುವುದಿಲ್ಲ.
- ಪ್ರಾಥಮಿಕ ಶಾಲೆಗಳಲ್ಲಿ ಶೇ. 67 ರಷ್ಟು ಮತ್ತು ಪ್ರೌಢಶಾಲೆಗಳಲ್ಲಿ ಶೇ. 12 ರಷ್ಟು, ಒಟ್ಟಾರೆ ಶೇ. 40 ರಷ್ಟು ಶಿಕ್ಷಕರು, ವಿದ್ಯಾರ್ಥಿಗಳು Q.R ಕೋಡ್ ಬಳಸುತ್ತಿರುವುದರ ಬಗ್ಗೆ ಮೇಲ್ವಿಚಾರಣೆ ಮಾಡಿರುವುದಿಲ್ಲ.
- ತರಗತಿ ಪ್ರಕ್ರಿಯೆಯಲ್ಲಿ Q.R ಕೋಡ್ ಮೂಲಕ e-ಸಂಪನ್ಮೂಲಗಳನ್ನು ಬಳಸಿಕೊಳ್ಳುವಾಗ ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ತಮಗೆ ಎದುರಾಗುವ ಸಾಕಷ್ಟು ಸಮಸ್ಯೆಗಳನ್ನು ಪಟ್ಟಿ ಮಾಡಿರುತ್ತಾರೆ. ತರಗತಿ ಪ್ರಕ್ರಿಯೆಯಲ್ಲಿ Q. R ಕೋಡ್ ಮೂಲಕ e-ಸಂಪನ್ಮೂಲಗಳನ್ನು ಬಳಸಿಕೊಳ್ಳುವಾಗ ಸಾಕಷ್ಟು ಸಮಸ್ಯೆಗಳು ಎದುರಾಗು-ತ್ತಿರುವುದರಿಂದ, ಅನೇಕ ಶಾಲೆಗಳಲ್ಲಿ ಇದರ ಬಳಕೆ ಆಗುತ್ತಿಲ್ಲ ಎಂದು ತಿಳಿದು ಬರುತ್ತದೆ.
- ಪ್ರಾಥಮಿಕ ಶಾಲೆಗಳಲ್ಲಿ ಶೇ 52% ಮತ್ತು ಪ್ರೌಢ ಶಾಲೆಗಳಲ್ಲಿ ಶೇ 33% ಒಟ್ಟಾರೆ ಶೇ 43% ವಿದ್ಯಾರ್ಥಿಗಳು Q.R ಕೋಡ್‌ನಲ್ಲಿರುವ ಇ - ಸಂಪನ್ಮೂಲಗಳನ್ನು ಸಂಗ್ರಹಿಸಿಕೊಳ್ಳಲು ಪೂರಕವಾದ ಸೌಲಭ್ಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.
- ಪ್ರಾಥಮಿಕ ಶಾಲೆಗಳಲ್ಲಿ ಶೇ 31% ಮತ್ತು ಪ್ರೌಢ ಶಾಲೆಗಳಲ್ಲಿ ಶೇ 6% ಒಟ್ಟಾರೆ ಶೇ 19% ವಿದ್ಯಾರ್ಥಿಗಳಿಗೆ Q.R ಕೋಡ್ ಅನ್ನು ದೀಕ್ಷಾ ಆಪ್‌ನಲ್ಲಿ ವಿಷಯವಾರು ಇ-ಸಂಪನ್ಮೂಲಗಳನ್ನು ಸುಲಭವಾಗಿ ಹುಡುಕಲು ಸಾಧ್ಯವಾಗುತ್ತಿಲ್ಲ ಎಂಬುದು ತಿಳಿದು ಬಂದಿದೆ.
- ಪ್ರಾಥಮಿಕ ಶಾಲೆಗಳಲ್ಲಿ ಶೇ 27% ಮತ್ತು ಪ್ರೌಢ ಶಾಲೆಗಳಲ್ಲಿ ಶೇ 40% ಹಾಗೂ ಒಟ್ಟಾರೆ ಶೇ 33% ವಿದ್ಯಾರ್ಥಿಗಳು Q.R ಕೋಡ್ ಬಳಸುವಾಗ ಸಾಕಷ್ಟು ತಾಂತ್ರಿಕ ತೊಂದರೆಗಳು ಉಂಟಾಗುತ್ತಿವೆ ಎಂದು ತಿಳಿಸಿರುವುದು ಕಂಡು ಬಂದಿದೆ.
- ಪ್ರಾಥಮಿಕ ಶಾಲೆಗಳಲ್ಲಿ ಶೇ 25% ಪೋಷಕರಿಗೆ ಪಠ್ಯ ಪುಸ್ತಕದಲ್ಲಿ ಅಳವಡಿಸಿರುವ Q. R ಕೋಡ್‌ನ ಬಗ್ಗೆ ಮಾಹಿತಿ ತಿಳಿದಿಲ್ಲ, ಪ್ರೌಢ ಶಾಲೆಯ ಪೋಷಕರಿಗೆ ತಿಳಿದಿರುವುದು ಕಂಡು ಬಂದಿದೆ.
- ಪ್ರಾಥಮಿಕ ಶಾಲೆಗಳಲ್ಲಿ ಶೇ 67% ಮತ್ತು ಪ್ರೌಢ ಶಾಲೆಗಳಲ್ಲಿ ಶೇ 25% ಪೋಷಕರು ಪಠ್ಯ ಪುಸ್ತಕದಲ್ಲಿ ಅಳವಡಿಸಿರುವ Q.R ಕೋಡ್ ಅನ್ನು ತಮ್ಮ ಮಕ್ಕಳು ಬಳಸುತ್ತಿರುವುದನ್ನು ಗಮನಿಸಿರುವುದಿಲ್ಲ ಎಂದು ಕಂಡು ಬಂದಿದೆ.

- ಪ್ರಾಥಮಿಕ ಶಾಲೆಗಳಲ್ಲಿ ಶೇ 75% ಮತ್ತು ಪ್ರೌಢ ಶಾಲೆಗಳಲ್ಲಿ ಶೇ 42%, ಒಟ್ಟಾರೆ ಶೇ 58% ಪೋಷಕರು Q.R ಕೋಡ್ನ ಬಳಕೆಯ ತಂತ್ರಜ್ಞಾನದಿಂದ ದೈನಂದಿನ ವ್ಯವಹಾರಗಳನ್ನು ಸರಳವಾಗಿ ನಡೆಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ವ್ಯಕ್ತ ಪಡಿಸಿರುವುದು ಕಂಡು ಬಂದಿದೆ. ಇದರಿಂದ ಅವರಿಗೆ Q.R ಕೋಡ್ ನ *ಅರಿವಿಲ್ಲದಿರುವುದು ಸ್ಪಷ್ಟವಾಗುತ್ತದೆ.*
- Q.R ಕೋಡ್ ಸ್ಕ್ಯಾನ್ ಮಾಡುವ ವಿಧಾನ ಹಾಗೂ ಅದಕ್ಕೆ ಅವಶ್ಯಕವಾದ ಆಪ್ಗಳ ಬಗ್ಗೆ ಮಾಹಿತಿ ನೀಡುವ ಅವಶ್ಯಕತೆ ಇದೆ.
- ಸಾಕಷ್ಟು ವಿದ್ಯಾರ್ಥಿಗಳ ಬಳಿ Q.R ಕೋಡ್ ಸ್ಕ್ಯಾನ್ ಮಾಡಲು ಸ್ಮಾರ್ಟ್ ಫೋನ್ಗಳು ಲಭ್ಯವಿರುವುದಿಲ್ಲ ಎಂದು ಮುಖ್ಯಶಿಕ್ಷಕರು ಮತ್ತು ಶಿಕ್ಷಕರು ಸಮಸ್ಯೆಯನ್ನು ವ್ಯಕ್ತಪಡಿಸಿರುವುದು ಅಧ್ಯಯನದಿಂದ ಕಂಡು ಬಂದಿದೆ.
- ಕೆಲವು ಶಾಲೆಗಳಲ್ಲಿ Q.R ಕೋಡ್ ಬಳಸಿ e-ಸಂಪನ್ಮೂಲಗಳನ್ನು ಬಳಸಿಕೊಳ್ಳಲು ನೆಟ್ ವರ್ಕ್ ಸಮಸ್ಯೆ ಇರುವುದು ಕಂಡು ಬರುತ್ತದೆ.
- e-ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಬೇಕಾದ ಉಪಕರಣಗಳ ಕೊರತೆ ಸಾಕಷ್ಟು ಶಾಲೆಗಳಲ್ಲಿ ಕಂಡು ಬರುತ್ತದೆ ಎಂದು ಮುಖ್ಯಶಿಕ್ಷಕರು ಮತ್ತು ಶಿಕ್ಷಕರ ಅಭಿಪ್ರಾಯದಿಂದ ತಿಳಿದು ಬಂದಿದೆ.
- SDMC ಸಭೆಗಳಲ್ಲಿ Q.R ಕೋಡ್ ಅನ್ನು ವಿದ್ಯಾರ್ಥಿಗಳು ಬಳಸುತ್ತಿರುವುದರ ಬಗ್ಗೆ ಚರ್ಚಿಸಿ ಮೇಲ್ವಿಚಾರಣೆ ಮಾಡಲು ಹಾಗೂ ಪೋಷಕರ ಗಮನಕ್ಕೆ ತರುವ ಅವಶ್ಯಕತೆ ಇದೆ.

ಅಧ್ಯಯನದ ಫಲಗಳನ್ನು ಆಧರಿಸಿ ಡಯಟ್ ಹಂತದಲ್ಲಿ ಮತ್ತು ಶಾಲಾ ಹಂತದಲ್ಲಿ ಕೈಗೊಳ್ಳುವ ಉಪಕ್ರಮಗಳು

2020-21 ನೇ ಸಾಲಿನಲ್ಲಿ ಶಿಕ್ಷಕ ಶಿಕ್ಷಣ ಯೋಜನೆಯ ಅಡಿಯಲ್ಲಿ DSERT ವತಿಯಿಂದ ಅನುಮೋದಿತ, ತುಮಕೂರು (ದ) ಜಿಲ್ಲೆಯಲ್ಲಿ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q.R ಕೋಡ್ ಅನ್ನು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಬಳಸುತ್ತಿರುವ ವಿಷಯದ ಕುರಿತು ಶೈಕ್ಷಣಿಕ ಅಧ್ಯಯನ ಎಂಬ ಶೀರ್ಷಿಕೆಯಡಿ ಅಧ್ಯಯನ ಕೈಗೊಳ್ಳಲಾಗಿದ್ದು, ಈ ಸಮೀಕ್ಷೆಯಲ್ಲಿ ಶಾಲೆಗಳ ಮುಖ್ಯಶಿಕ್ಷಕರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಪ್ರತ್ಯೇಕವಾಗಿ ಪ್ರಶ್ನಾವಳಿಗಳನ್ನು ನೀಡಿ, ಅವರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ಇವರ ಅಭಿಪ್ರಾಯಗಳ ಆಧಾರದ ಮೇಲೆ ಗುರ್ತಿಸಿದ ಫಲಶೃತಿ ಅಂಶಗಳಿಗೆ ಈ ಕೆಳಗಿನಂತೆ ಪರಿಹಾರೋಪಾಯಗಳನ್ನು ಅನುಸರಿಸಿದಲ್ಲಿ, ಶಾಲೆಯ ಮಕ್ಕಳ ಕಲಿಕಾ ಚಟುವಟಿಕೆಗಳಿಗೆ ಒಂದು ಉತ್ತಮ ವ್ಯವಸ್ಥೆಯಾಗಿ, ಗುಣಮಟ್ಟದ ಕಲಿಕೆಗೆ ಪೂರಕವಾಗಬಹುದೆಂಬ ಅಭಿಪ್ರಾಯದಲ್ಲಿ ಕೆಳಗಿನಂತೆ ಸಲಹೆಗಳನ್ನು ನೀಡಲಾಗಿದೆ.

- ಎಲ್ಲಾ ಮುಖ್ಯಶಿಕ್ಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ Q. R ಕೋಡ್ ಅನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ ಮಾಹಿತಿ ಇದೆ. ಇದನ್ನು ಬಳಸಿಕೊಳ್ಳಲು ಇದಕ್ಕೆ ಸಂಬಂಧಿಸಿದ ಸಾಧನಗಳನ್ನು ಶಾಲೆಗಳಲ್ಲಿ ಸಮರ್ಪಕವಾಗಿ ನಿರ್ವಹಿಸಿದಾಗ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟ ಹೆಚ್ಚಾಗುತ್ತದೆ. ಆದ್ದರಿಂದ SDMC ಸದಸ್ಯರು ಮತ್ತು ಪೋಷಕರನ್ನು ಸಂಪರ್ಕಿಸಿ ಶಾಲೆಗಳಲ್ಲಿ ಗಣಕಯಂತ್ರ, ಪ್ರೊಜೆಕ್ಟರ್, ಯು.ಪಿ.ಎಸ್ ಮತ್ತು ಬ್ಯಾಟರಿಗಳು ಲಭ್ಯವಿರುವಂತೆ ನೋಡಿಕೊಳ್ಳಬೇಕಾಗಿದೆ. SDMC ಮತ್ತು ಪೋಷಕರ ಸಭೆಗಳಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳುವುದು.
- ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯಶಿಕ್ಷಕರು, e-ಸಂಪನ್ಮೂಲಗಳನ್ನು Q.R ಕೋಡ್ ಉಪಯೋಗಿಸಿಕೊಂಡು ವಿದ್ಯಾರ್ಥಿಗಳು ಬಳಸುತ್ತಿರುವುದರ ಬಗ್ಗೆ ಮೇಲ್ವಿಚಾರಣೆ ಮಾಡುವುದು ಅತಿ ಮುಖ್ಯವಾಗಿರುತ್ತದೆ ಹಾಗೂ ಕುಂದುಕೊರತೆಗಳ ಬಗ್ಗೆ ವಿಚಾರಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕಾಗಿದೆ. ಇದರಿಂದ ಎಲ್ಲಾ ವಿದ್ಯಾರ್ಥಿಗಳು ಸಕ್ರಿಯವಾಗಿ ಈ ವಿಷಯದ ಬಗ್ಗೆ ತೊಡಗಿಸಿಕೊಳ್ಳಲು ಹಾಗೂ ಸ್ವಕಲಿಕೆಗೆ ಪ್ರೇರಣೆ ನೀಡಿದಂತಾಗುತ್ತದೆ. *ಡಯಟ್‌ನ ಉಪನ್ಯಾಸಕರು ಶಾಲೆಗಳಿಗೆ ಭೇಟಿ ನೀಡಿ ಮಾರ್ಗದರ್ಶನ ಮಾಡುವ ಅವಶ್ಯಕತೆ ಇದೆ.*
- ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯಶಿಕ್ಷಕರು, Q.R ಕೋಡ್ ಬಳಕೆಯಿಂದ ವಿದ್ಯಾರ್ಥಿಗಳ ಕಲಿಕೆಯಲ್ಲಿ ಯಾವ ರೀತಿ ಪ್ರಗತಿ ಉಂಟಾಗಿದೆ

ಎಂಬುದನ್ನು ಖಾತ್ರಿಪಡಿಸಿಕೊಂಡು ಮಾರ್ಗದರ್ಶನ ನೀಡುವುದು ಅಗತ್ಯವಾಗಿದೆ. *ಭೇಟಿಯ ಸಂದರ್ಭದಲ್ಲಿ ಡಯಟ್‌ನ ಉಪನ್ಯಾಸಕರು ಈ ಬಗ್ಗೆ ಚರ್ಚಿಸಿ, ಮಾರ್ಗದರ್ಶನ ನೀಡಬೇಕಾಗಿದೆ ಮತ್ತು ಕ್ಲಸ್ಟರ್ ಸಮಾಲೋಚನಾ ಸಭೆಗಳಲ್ಲಿ ಚರ್ಚಿಸಿ ಮಾರ್ಗದರ್ಶನ ನೀಡಬೇಕಾಗಿದೆ.* ಇದರಿಂದ ವಿದ್ಯಾರ್ಥಿಗಳು Q.R ಕೋಡ್ ಬಳಸಲು ಹೆಚ್ಚು ಆಸಕ್ತಿ ವಹಿಸಿ ಕಲಿಕೆಯಲ್ಲಿ ತೊಡಗಿಕೊಳ್ಳುವರು.

- ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯಶಿಕ್ಷಕರು ತಪ್ಪದೇ Q.R ಕೋಡ್ ಬಳಸುವ ನಿಟ್ಟಿನಲ್ಲಿ ಉಂಟಾಗುವ ತಾಂತ್ರಿಕ ದೋಷಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸಿ ಸೂಕ್ತ ಮಾರ್ಗದರ್ಶನ ನೀಡಿ ಸಮಸ್ಯೆ ಪರಿಹರಿಸಬೇಕಾಗುತ್ತದೆ.
- ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯಶಿಕ್ಷಕರು, ಶೈಕ್ಷಣಿಕ ಮೆಲ್ವಿಚಾರಣೆ ನಡೆಸಿ e-ಸಂಪನ್ಮೂಲಗಳ ಬಳಕೆಯ ಬಗ್ಗೆ ಪರಿಶೀಲಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು ಅತ್ಯಂತ ಅವಶ್ಯಕವಾಗಿದೆ. ಇದರಿಂದ ಎಲ್ಲಾ ಶಿಕ್ಷಕರು ತರಗತಿ ಕೋಣೆಗಳಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಸಹಕಾರಿಯಾಗುತ್ತದೆ.
- ಅತಿ ಹೆಚ್ಚಿನ ಸಂಖ್ಯೆಯ ಶಿಕ್ಷಕರು Q.R ಕೋಡ್ ಅನ್ನು ಸ್ಕ್ಯಾನ್ ಮಾಡಿ e-ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿರುವುದಿಲ್ಲವೆಂದು ಸಮೀಕ್ಷೆಯಿಂದ ತಿಳಿದು ಬಂದಿದೆ. ಆದ್ದರಿಂದ ಎಲ್ಲಾ ಶಿಕ್ಷಕರು ಈ ಬಗ್ಗೆ ಗಮನ ಹರಿಸಿ e-ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಪ್ರಯತ್ನಿಸುವ ಅವಶ್ಯಕತೆಯಿದೆ. *ಈ ನಿಟ್ಟಿನಲ್ಲಿ ಶಿಕ್ಷಕರಿಗೆ ತರಬೇತಿ ನೀಡುವ ಅಗತ್ಯತೆಯಿದೆ.*
- ಅತಿ ಹೆಚ್ಚಿನ ಸಂಖ್ಯೆಯ ಶಿಕ್ಷಕರು ದೈನಂದಿನ ಜೀವನದಲ್ಲಿ Q.R ಕೋಡ್ ಅನ್ನು ಬಳಸುತ್ತಿರುವ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಮಾರ್ಗದರ್ಶನ ನೀಡದಿರುವುದು ಸಮೀಕ್ಷೆಯಿಂದ ಕಂಡುಬಂದಿದ್ದು, ಶಿಕ್ಷಕರು ಈ ಬಗ್ಗೆ ಮಾರ್ಗದರ್ಶನ ನೀಡುವ ಅವಶ್ಯಕತೆಯಿದೆ.
- ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಅತಿ ಹೆಚ್ಚಿನ ಸಂಖ್ಯೆಯ ಶಿಕ್ಷಕರು, ವಿದ್ಯಾರ್ಥಿಗಳು Q.R ಕೋಡ್ ಅನ್ನು ಬಳಸುತ್ತಿರುವುದರ ಬಗ್ಗೆ ಮೇಲ್ವಿಚಾರಣೆ ಮಾಡದಿರುವುದು ಸಮೀಕ್ಷೆಯಿಂದ ತಿಳಿದು ಬಂದಿದ್ದು, ಎಲ್ಲಾ ಶಿಕ್ಷಕರು ಸಮರ್ಪಕವಾಗಿ Q.R ಕೋಡ್ ಅನ್ನು ವಿದ್ಯಾರ್ಥಿಗಳು ಬಳಸುತ್ತಿರುವುದರ ಬಗ್ಗೆ ಮೇಲ್ವಿಚಾರಣೆ ಮಾಡಿ ಮಾರ್ಗದರ್ಶನ ನೀಡಬೇಕಾಗಿದೆ. *ಡಯಟ್‌ನ ಉಪನ್ಯಾಸಕರು ಭೇಟಿಯ ಸಂದರ್ಭದಲ್ಲಿ ಈ ಬಗ್ಗೆ ಮೇಲ್ವಿಚಾರಣೆ ಮಾಡಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕಾಗಿದೆ.*
- ಅತಿ ಹೆಚ್ಚು ಶಾಲೆಗಳಲ್ಲಿ e-ಸಂಪನ್ಮೂಲಗಳನ್ನು ಸಂಗ್ರಹಿಸಲು ಪೂರಕವಾದ ಸೌಲಭ್ಯವಿರುವುದಿಲ್ಲ ಎಂದು ವಿದ್ಯಾರ್ಥಿಗಳಿಂದ, ಸಮೀಕ್ಷೆಯ ಮೂಲಕ ತಿಳಿದು

ಬಂದಿದೆ. ಮುಖ್ಯಶಿಕ್ಷಕರು ಈ ಬಗ್ಗೆ ಗಮನ ಹರಿಸಿ e-ಸಂಪನ್ಮೂಲಗಳನ್ನು ಸಂಗ್ರಹಿಸಲು ಪೂರಕವಾದ ಸೌಲಭ್ಯಗಳು ಶಾಲೆಯಲ್ಲಿ ಲಭ್ಯವಿರುವಂತೆ ನೋಡಿಕೊಳ್ಳಲು ಪ್ರಯತ್ನಿಸುವ ಅವಶ್ಯಕತೆ ಇದೆ. SDMC ಸದಸ್ಯರು ಹಾಗೂ ಪೋಷಕರೊಂದಿಗೆ ಚರ್ಚಿಸಿ, ಪೂರಕವಾದ ಸೌಲಭ್ಯಗಳನ್ನು ಸಂಗ್ರಹಿಸುವುದು. ಹಳೇ ವಿದ್ಯಾರ್ಥಿಗಳು ಮತ್ತು ದಾನಿಗಳನ್ನು ಸಂಪರ್ಕಿಸಿ, ಸಂಪನ್ಮೂಲಗಳನ್ನು ಸಂಗ್ರಹಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುವುದು.

- ಪ್ರಾಥಮಿಕ ಶಾಲೆಗಳಲ್ಲಿನ ಸಾಕಷ್ಟು ವಿದ್ಯಾರ್ಥಿಗಳಿಗೆ ದೀಕ್ಷಾ ಅಪ್‌ನಲ್ಲಿ ವಿಷಯಾಧಾರಿತ e-ಸಂಪನ್ಮೂಲಗಳನ್ನು ಸುಲಭವಾಗಿ ಹುಡುಕಲು ಸಾಧ್ಯವಾಗುತ್ತಿಲ್ಲವೆಂದು ಸಮೀಕ್ಷೆಯಿಂದ ತಿಳಿದು ಬಂದಿದ್ದು, ಮುಖ್ಯಶಿಕ್ಷಕರು ಹಾಗೂ ಸಹ ಶಿಕ್ಷಕರು Q.R ಕೋಡ್‌ನ ಸಹಾಯದಿಂದ ದೀಕ್ಷಾ ಆಪ್‌ನಲ್ಲಿ ವಿಷಯವಾರು e-ಸಂಪನ್ಮೂಲಗಳನ್ನು ಸುಲಭವಾಗಿ ಹುಡುಕುವುದು ಹೇಗೆ ಎಂದು ತಿಳಿಸಿಕೊಡುವ ಅಗತ್ಯವಿದೆ.
- Q.R ಕೋಡ್ ಬಳಸುವಾಗ ಸಾಕಷ್ಟು ತಾಂತ್ರಿಕ ತೊಂದರೆಗಳು ಉಂಟಾಗುತ್ತಿವೆ ಎಂದು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ತಿಳಿಸಿರುವುದು ಸಮೀಕ್ಷೆಯಿಂದ ಕಂಡು ಬಂದಿರುವುದರಿಂದ, ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ಈ ಬಗ್ಗೆ ಪರಿಶೀಲಿಸಿ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಿಕೊಳ್ಳಲು ಮಾರ್ಗದರ್ಶನ ನೀಡುವ ಅಗತ್ಯತೆಯಿದೆ.
- ತರಗತಿ ಪ್ರಕ್ರಿಯೆಯಲ್ಲಿ Q.R ಕೋಡ್ ಮೂಲಕ e-ಸಂಪನ್ಮೂಲಗಳನ್ನು ಬಳಸಿಕೊಳ್ಳುವಾಗ, ಮುಖ್ಯಶಿಕ್ಷಕರು ಹಾಗೂ ಶಿಕ್ಷಕರಿಗೆ ಅನೇಕ ಸಮಸ್ಯೆಗಳು ಎದುರಾಗುತ್ತಿರುವುದರಿಂದ, ಅನೇಕ ಶಾಲೆಗಳಲ್ಲಿ ಇದರ ಬಳಕೆ ಸಮರ್ಪಕವಾಗಿ ಆಗುತ್ತಿಲ್ಲವೆಂದು ತಿಳಿದು ಬಂದಿದ್ದು, ಮುಖ್ಯಶಿಕ್ಷಕರು ಹಾಗೂ ಶಿಕ್ಷಕರಿಗೆ ಸದರಿ ವಿಷಯದ ಬಗ್ಗೆ ತರಬೇತಿಯ ಅಗತ್ಯತೆ ಇದೆ.
- ಪ್ರಾಥಮಿಕ ಶಾಲೆಗಳ ಸಾಕಷ್ಟು ಪೋಷಕರಿಗೆ ಪಠ್ಯಪುಸ್ತಗಳಲ್ಲಿ ಅಳವಡಿಸಿರುವ Q.R ಕೋಡ್‌ನ ಬಗ್ಗೆ *ತಿಳಿದಿಲ್ಲ* ಎಂಬುದು ಸಮೀಕ್ಷೆಯಿಂದ ಸ್ಪಷ್ಟವಾಗಿದ್ದು, ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ಈ ಬಗ್ಗೆ ಗಮನ ಹರಿಸಿ ಪೋಷಕರಿಗೆ Q.R ಕೋಡ್‌ನ ಬಗ್ಗೆ ತಿಳಿಸಿಕೊಡುವ ಅಗತ್ಯತೆ ಇದೆ.
- ಅತಿ ಹೆಚ್ಚಿನ ಪೋಷಕರು ಪಠ್ಯಪುಸ್ತಕದಲ್ಲಿ ಅಳವಡಿಸಿರುವ Q.R ಕೋಡ್ ಅನ್ನು ತಮ್ಮ ಮಕ್ಕಳು ಬಳಸುತ್ತಿರುವುದನ್ನು ಗಮನಿಸಿರುವುದಿಲ್ಲ ಎಂದು ತಿಳಿಸಿದ್ದು, ಈ ಬಗ್ಗೆ ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ಎಲ್ಲಾ ಪೋಷಕರಿಗೆ ತಮ್ಮ ಮಕ್ಕಳು

ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q.R ಕೋಡ್ ಅನ್ನು ಬಳಸುತ್ತಿರುವ ಬಗ್ಗೆ ಗಮನ ಹರಿಸುವಂತೆ ಮಾರ್ಗದರ್ಶನ ನೀಡಬೇಕಿದೆ.

- ಅತಿ ಹೆಚ್ಚಿನ ಸಂಖ್ಯೆಯ ಪೋಷಕರು Q.R ಕೋಡ್‌ನ ಬಳಕೆಯ ತಂತ್ರಜ್ಞಾನದಿಂದ ದೈನಂದಿನ ವ್ಯವಹಾರವನ್ನು ಸರಳವಾಗಿ ನಡೆಸಲು ಸಾಧ್ಯವಿಲ್ಲವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣ Q.R ಕೋಡ್‌ನ ಬಳಕೆಯ ಬಗ್ಗೆ ಪೋಷಕರಿಗೆ ಅರಿವಿಲ್ಲದಿರುವುದು. ಈ ಬಗ್ಗೆ ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ಗಮನ ಹರಿಸಿ ಅವರಿಗೆ ದೈನಂದಿನ ವ್ಯವಹಾರದಲ್ಲಿ Q.R ಕೋಡ್‌ನ ಸರಳತೆಯ ಬಗ್ಗೆ ಅರಿವು ಮೂಡಿಸಬೇಕಾಗಿದೆ.
- Q.R ಕೋಡ್ ಸ್ಕ್ಯಾನ್ ಮಾಡುವ ವಿಧಾನ ಹಾಗೂ ಅದಕ್ಕೆ ಅವಶ್ಯಕವಾದ ಆಪ್‌ಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಅವಶ್ಯಕತೆ ಇದೆ.
- ಎಲ್ಲಾ ವಿದ್ಯಾರ್ಥಿಗಳ ಬಳಿ Q.R ಕೋಡ್ ಸ್ಕ್ಯಾನ್ ಮಾಡಲು ಸ್ಮಾರ್ಟ್ ಫೋನ್‌ಗಳು ಲಭ್ಯವಿರುವಂತೆ ನೋಡಿಕೊಳ್ಳಲು, ಮುಖ್ಯಶಿಕ್ಷಕರು ಪೋಷಕರನ್ನು ಸಂಪರ್ಕಿಸಿ ಅವರ ಮನವೊಲಿಸುವ ಅವಶ್ಯಕತೆಯಿದೆ. ಪೋಷಕರ ಸಭೆಗಳಲ್ಲಿ ಈ ವಿಷಯದ ಬಗ್ಗೆ ಚರ್ಚಿಸುವುದು.
- ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು Q.R ಕೋಡ್ ಬಳಸಿ e-ಸಂಪನ್ಮೂಲಗಳನ್ನು ಬಳಸಿಕೊಳ್ಳಲು ನೆಟ್‌ವರ್ಕ್ ಸಮಸ್ಯೆಯಾಗದಂತೆ ಜಾಗ್ರತೆ ವಹಿಸಬೇಕಾಗಿದೆ.
- ಶಾಲೆಗಳಲ್ಲಿ e-ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಬೇಕಾದ ಉಪಕರಣಗಳು ಲಭ್ಯವಿರುವ ಬಗ್ಗೆ ಮುಖ್ಯಶಿಕ್ಷಕರು ಖಾತ್ರಿಪಡಿಸಿಕೊಂಡು, ಅವುಗಳ ಸಂಗ್ರಹಣೆಗೆ ಹೆಚ್ಚು ಒತ್ತು ನೀಡಬೇಕಾಗಿದೆ. SDMC ಸಭೆಗಳಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳುವುದು.
- ತರಗತಿ ಪ್ರಕ್ರಿಯೆಯಲ್ಲಿ Q.R ಕೋಡ್ ಮೂಲಕ e-ಸಂಪನ್ಮೂಲಗಳನ್ನು ಬಳಸಿಕೊಳ್ಳುವಾಗ ಮುಖ್ಯಶಿಕ್ಷಕರು ಹಾಗೂ ಶಿಕ್ಷಕರಿಗೆ ಸಾಕಷ್ಟು ಸಮಸ್ಯೆಗಳು ಎದುರಾಗುತ್ತಿರುವುದು ಸಮೀಕ್ಷೆಯಿಂದ ಕಂಡುಬಂದಿದ್ದು, ಸದರಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಎಲ್ಲಾ ಶಾಲೆಗಳಲ್ಲಿಯೂ Q.R ಕೋಡ್ ಬಳಸಿ e-ಸಂಪನ್ಮೂಲಗಳನ್ನು ಸಂಗ್ರಹಿಸಿ ವಿದ್ಯಾರ್ಥಿಗಳಿಗೆ ಪರಿಚಯಿಸಬೇಕಾಗಿರುತ್ತದೆ.

ಉಪಸಂಹಾರ

2020-21 ನೇ ಸಾಲಿನ ಶಿಕ್ಷಕ ಶಿಕ್ಷಣ ಯೋಜನೆಯ ಅಡಿಯಲ್ಲಿ DSERT ವತಿಯಿಂದ ಅನುಮೋದಿತ 2020-21 ನೇ ಸಾಲಿನಲ್ಲಿ ತುಮಕೂರು (ದ) ಜಿಲ್ಲೆಯಲ್ಲಿ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ Q. R ಕೋಡ್ ಅನ್ನು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಬಳಸುತ್ತಿರುವ ವಿಷಯದ ಕುರಿತು ಶೈಕ್ಷಣಿಕ ಅಧ್ಯಯನ ಎಂಬ ಶೀರ್ಷಿಕೆಯಡಿ ಅಧ್ಯಯನ ಕೈಗೊಳ್ಳಲಾಗಿತ್ತು.

ಈ ಅಧ್ಯಯನದಲ್ಲಿ 24 ಶಾಲೆಗಳ ಮುಖ್ಯಶಿಕ್ಷಕರು, ಶಿಕ್ಷಕರು, 6 ಮತ್ತು 7 ನೇ ತರಗತಿ ವಿದ್ಯಾರ್ಥಿಗಳು ಹಾಗೂ 8, 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳು, ಎಲ್ಲಾ ಶಾಲೆಗಳ ಪೋಷಕರಿಗೆ ಪ್ರತ್ಯೇಕವಾಗಿ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಂಡು ಅಭಿಪ್ರಾಯ ಸಂಗ್ರಹಿಸಲಾಯಿತು. ಪ್ರಶ್ನಾವಳಿಗಳ ಮೌಲ್ಯಮಾಪನ ಮಾಡಿ ಪಡೆದ ಅಂಕಗಳನ್ನು ಶೇಕಡಾಕ್ಕೆ ಪರಿವರ್ತಿಸಲಾಗಿದೆ. ಈ ಅಂಕಿ ಅಂಶಗಳ ಆಧಾರದ ಮೇಲೆ ಸ್ತಂಭ ನಕ್ಷೆ ತಯಾರಿಸಿ ಪ್ರತಿಯೊಂದು ಪ್ರಶ್ನೆಗೂ ಪಡೆದ ಉತ್ತರಗಳನ್ನು ಸ್ತಂಭ ನಕ್ಷೆ ಮೂಲಕ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲಾವಾರು ಹಾಗೂ ಶೇಕಡಾವಾರು ವಿಶ್ಲೇಷಣೆ ಮಾಡಲಾಗಿದೆ.

ಈ ವಿಶ್ಲೇಷಣೆಯಿಂದ ಕಂಡುಕೊಂಡ ಫಲಿತಾಂಶಗಳ ಆಧಾರದಿಂದ ಒಂದು ತೀರ್ಮಾನಕ್ಕೆ ಬರಲು ಅಥವಾ ಪರಿಹಾರ ಕಂಡುಕೊಳ್ಳಲು ಸಹಾಯಕವಾಗಿದೆ. ಗುರ್ತಿಸಿದ ಫಲಶೃತಿ ಅಂಶಗಳಿಗೆ ಪೂರಕವಾಗಿ ಅಗತ್ಯ ಸೂಕ್ತ ಮಾರ್ಗದರ್ಶನವನ್ನು ನೀಡಲಾಗಿದೆ. ಅದರಂತೆ ಅನುಷ್ಠಾನ ಮಾಡಿದಲ್ಲಿ ಶಾಲೆಯ ಮಕ್ಕಳ ಕಲಿಕಾ ಚಟುವಟಿಕೆಗಳಿಗೆ ಒಂದು ಉತ್ತಮ ವ್ಯವಸ್ಥೆಯಾಗಿ ನಿರ್ಮಾಣವಾಗುತ್ತದೆ ಎಂಬುದು ನಮ್ಮ ಅಭಿಪ್ರಾಯ.

ಗ್ರಂಥಋಣ

- 2019-20 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 6 ರಿಂದ 10 ನೇ ತರಗತಿಯವರೆಗಿನ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ವಿಷಯಗಳ ಪಠ್ಯಪುಸ್ತಕಗಳನ್ನು Energized Text Books (ETB) ಗಳ Q. R ಕೋಡ್‌ಗೆ ಲಿಂಕ್ ಮಾಡಿರುವ ಮಾಹಿತಿ ಮತ್ತು ಅದರ ಅರ್ಥ ಹಾಗೂ ಹಿನ್ನೆಲೆ ಬಗ್ಗೆ DSERT ವತಿಯಿಂದ ಮಾಹಿತಿಯನ್ನು ಪಡೆಯಲಾಗಿದೆ.
- ಅಂತರ್ಜಾಲದಲ್ಲಿ Q. R ಕೋಡ್‌ನ ಹಿನ್ನೆಲೆ ಮತ್ತು ಅದನ್ನು ವಿವಿಧ ಕ್ಷೇತ್ರಗಳಲ್ಲಿ ಬಳಸುತ್ತಿರುವುದರ ಬಗ್ಗೆ ಮಾಹಿತಿ ಪಡೆಯಲಾಗಿದೆ.
- ಡಯಟ್‌ನ ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರು ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಪಡೆದಿದೆ.

ಶ್ರೀ ಮಲ್ಲಿಕಾರ್ಜುನಾರಾಧ್ಯ.ಹೆಚ್.ಆರ್

ಉಪನ್ಯಾಸಕರು,

ಡಯಟ್, ತುಮಕೂರು